ತೃತೀಯ ಲಿಂಗ

ಹೊಸಪೇಟೆ ತಾಲೂಕಿನ ಗಂಡು ಜೋಗಮ್ಮರ ಅಧ್ಯಯನ

ಎಂ. ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಮಹಾಪ್ರಬಂಧ

ವಿದ್ಯಾರ್ಥಿಯ ಹೆಸರು
ಮಾಧವ ಪೆರಾಜೆ

ಮಾರ್ಗದರ್ಶನ
ಡಾ. ರಹಮತ್ ತರೀಕೆರೆ

ಜಾನಪದ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - 583211

ತೃತೀಯ ಲಿಂಗ

(ಹೊಸಪೇಟೆ ತಾಲೂಕಿನ ಗಂಡು ಜೋಗಮ್ಮರ ಅಧ್ಯಯನ)

ಎಂ. ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಮಹಾಪ್ರಬಂಧ

ವಿದ್ಯಾರ್ಥಿಯ ಹೆಸರು
ಮಾಧವ ಪೆರಾಜೆ

ಮಾರ್ಗದರ್ಶನ
ಡಾ. ರಹಮತ್ ತರೀಕೆರೆ

ಜಾನಪದ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - 583211

1993 - 94

ಸಂಪೂರ್ಣ ಸಂ. ಕ. ಚರಿತೆ.

3

ತೃತೀಯ ಲಿಂಗ

(ಹೊಸಪೇಟೆ ತಾಲೂಕಿನ ಗಂಡು ಜೋಗಮ್ಮರ ಅಧ್ಯಯನ)

ಎಂ. ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಲ್ಲಿಸಿದ ಮಹಾ ಪ್ರಬಂಧ

ವಿದ್ಯಾರ್ಥಿಯ ಹೆಸರು

ಮಾಧವ ಪೆರಾಜೆ

ಮಾರ್ಗದರ್ಶನ

ಡಾ: ರಹಮತ್ ತರಿಕೆರೆ

ಕನ್ನಡ ವಿಶ್ವವಿದ್ಯಾಲಯ

ಹಂಪಿ.

1993 – 94

: ಅರ್ಹತಾ ಪತ್ರ :

ತೃತೀಯ ಲಿಂಗ (ಹೊಸಪೇಟೆ ತಾಲೂಕಿನ ಗಂಡು ಜೋಗಮ್ಮರ ಅಧ್ಯಯನ) ಎಂಬ ಈ ಅಧ್ಯಯನವನ್ನು ಮಾಧವ ಪೆರಾಜೆಯವರು 1993-1994ರ ಎಂ.ಫಿಲ್ ಅಧ್ಯಯನದ ಆಂಶಿಕ ಅವಶ್ಯಕತೆಗಾಗಿ ನನ್ನೊಂದಿಗೆ ಸಮಾಲೋಚಿಸಿ ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಪ್ರಬಂಧವನ್ನು ಇಡಿಯಾಗಿ, ಇಲ್ಲವೇ ಬಿಡಿಯಾಗಿ ಇತರೆಡೆ ಯಾವುದೇ ಪದವಿಗಾಗಿ ಒಪ್ಪಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಹಂಪಿ.
1-4-1994.

ಡಾ. ರಹಮತ್ ತರೀಕೆರೆ.
ಮಾರ್ಗದರ್ಶಕರು
ರೀಡರ್,
ಕನ್ನಡ ಭಾಷೆ ಮತ್ತು
ಸಾಹಿತ್ಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ.

: ಪ್ರಮಾಣ ಪತ್ರ :

'ತ್ರಿಲಿಂಗ ರಂಗ' (ಹೊಸಪೇಟೆ ತಾಲೂಕಿನ ಗಂಡು ಜೋಗಮ್ಮರ ಅಧ್ಯಯನ) ಎಂಬ ಈ ಅಧ್ಯಯನ 1993 – 94ರ ಎಂ.ಫಿಲ್. ಅಧ್ಯಯನದ ಆಂಶಿಕ ಅವಶ್ಯಕತೆಗಾಗಿ ಡಾ. ರಹಮತ್ ತರೀಕೆರೆಯವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿರುತ್ತೇನೆ.

ಈ ಅಧ್ಯಯನದ ಯಾವುದೇ ಇಡಿ ಅಥವಾ ಬಿಡಿ ಭಾಗಗಳನ್ನು ಇತರೆಡೆ ಯಾವುದೇ ಪದವಿಗಾಗಿ ನಾನು ಒಪ್ಪಿಸಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಹಂಪಿ.
1.4.1994.

ಮಾಧವ ಪೆರಾಜೆ.

ಅರಿಕೆ

ಕನ್ನಡ ವಿಶ್ವವಿದ್ಯಾಲಯವಿರುವ ಹೊಸಪೇಟೆ ತಾಲೂಕಿಗೆ ಬಂದಂದಿನಿಂದ ಒಂದಲ್ಲ ಒಂದು ಕಾರಣಕ್ಕೆ ಎದುರಾಗುತ್ತಿದ್ದ ಗಂಡು ಜೋಗಮ್ಮರು ನನಗೆ ಕುತೂಹಲ ಉಂಟು ಮಾಡಿದ್ದರು. ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಸಹಜ ಸಂಪರ್ಕವಿರುವ ನನಗೆ ಅಲ್ಲೆಲ್ಲೂ ಕಂಡು ಬರದ ಈ ಜನವರ್ಗ ಇದ್ದಕ್ಕಿದ್ದಂತೆ ಬಳ್ಳಾರಿ ಜಿಲ್ಲೆಯಲ್ಲಿ ಕಂಡಾಗ ಕುತೂಹಲಿಗನಾದೆ. ಅದರ ಫಲವಾಗಿ ಈ ಮಹಾ ಪ್ರಬಂಧ ಸಿದ್ಧವಾಗಿದೆ.

ಅಧ್ಯಯನವೊಂದು ಯಾವಾಗಲೂ ವೈಯುಕ್ತಿಕ ನೆಲೆಯಲ್ಲೇ ವಿರಮಿಸಲು ಸಾಧ್ಯವಾಗುವುದಿಲ್ಲವೆಂದು ನಾನು ನಂಬಿದ್ದೇನೆ. ಅದಕ್ಕೆ ಅನೇಕ ಪೋಷಕ – ಪ್ರೇರಕ ಗುಣಗಳಿರುತ್ತವೆ. ಈ ನೆಲೆಯಲ್ಲಿ –

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ ಫಿಲ ಅಧ್ಯಯನ ನಡೆಸಲು ಅನುಮತಿ ನೀಡಿದ ಮಾನ್ಯ ಕುಲಪತಿಗಳಾದ ಡಾ. ಚಂದ್ರ ಶೇಖರ ಕಂಬಾರ ಅವರಿಗೆ,

ಅಧ್ಯಯನ ವೇಳೆಯಲ್ಲಿ ಶಿಷ್ಯ ಸಹಜ ಪ್ರೀತಿಯಿಂದ ಹಾಗೂ ಗೆಳೆತನದ ಸಲುಗೆಯಿಂದ ಸಲಹೆಗಳಿತ್ತ ಮಾರ್ಗದರ್ಶಕರಾದ ಡಾ. ರಹಮತ್ ತರಿಕೆರೆಯವರಿಗೆ,

ಕಛೇರಿ ಕೆಲಸಗಳ ಮಧ್ಯೆಯೇ ಈ ಮಹಾ ಪ್ರಬಂಧಕ್ಕೂ ನಾನು ಸಿದ್ಧತೆ ಮಾಡಿಕೊಳ್ಳಬೇಕಾದಾಗ ನನ್ನ ಗಡಿಬಿಡಿಯನ್ನು ಕಾಳಜಿಯ ನೆಲೆಯಿಂದ ಗಮನಿಸಿದವರು ಗುರುಗಳಾದ ಹಿ. ಚಿ. ಬೋರಲಿಂಗಯ್ಯನವರು. ನಿಯಮಗಳನ್ನು ಸಡಿಲಿಸಿದುದಲ್ಲದೆ, ಪ್ರಬಂಧದ ಸಿದ್ಧತೆಯಲ್ಲಿಯೂ ಸಲಹೆ ಸೂಚನೆಗಳಿತ್ತಿರುವ ಅವರಿಗೆ,

ಪ್ರಬಂಧದ ಸಿದ್ಧತೆಯ ಪ್ರಾಥಮಿಕ ಹಂತದಲ್ಲಿ ತಮ್ಮ ಅಪೂರ್ವ ವಿದ್ವತ್ತಿನಿಂದ ಇದರ 'ರೇಖಾಲೇಖ' ಕ್ಕೆ ಸಂಬಂಧಿಸಿದಂತೆ ಒಳನೋಟಗಳನ್ನಿತ್ತ ಗುರುಗಳಾದ ಪ್ರೊ: ಕಿ. ರಂ. ನಾಗರಾಜ ಅವರಿಗೆ,

ನನ್ನ ಎಳೆತನದಿಂದ ಇಲ್ಲಿಯವರೆಗೆ ಎಲ್ಲಾ ರೀತಿಯ 'ಏಳು ಬೀಳುಗಳನ್ನು ಗಮನಿಸಿರುವುದಲ್ಲದೆ ತೀವ್ರವಾಗಿ ಪ್ರಭಾವಿಸಿದವರು ಡಾ: ಪುರುಷೋತ್ತಮ ಬಿಳಿಮಲೆಯವರು. ಈ ಅಧ್ಯಯನದಲ್ಲಿಯೂ ಸಲಹೆ ಸೂಚನೆಗಳಲ್ಲದೆ ತಾಂತ್ರಿಕ ನೆರವನ್ನು ಇತ್ತಿರುವ ಅವರಿಗೆ.

ಈ ಪ್ರಬಂಧದ ಸಾರಲೇಖವನ್ನು ಗಮನಿಸಿ ತಮ್ಮ ಖಚಿತ ನಿಲುವಿನಿಂದ ನನ್ನ ಯೋಚನಾ ಲಹರಿಗೆ ಸ್ಪಷ್ಟತೆಯನ್ನು ತಂದವರು ಕುಲಸಚಿವರಾದ ಡಾ. ಕೆ.ವಿ ನಾರಾಯಣ ಅವರು, ಈ ಪ್ರಬಂಧಕ್ಕೆ ಸಂಬಂಧಿಸಿದಂತೆ ನನ್ನಲ್ಲಿರುವ ಕೆಲವೊಂದು ಗೊಂದಲಗಳನ್ನು ನಿವಾರಿಸಿದ ಅವರಿಗೆ.

ಎಂ.ಫಿಲ ಅಧ್ಯಯನದ ಸಂದರ್ಭಗಳಲ್ಲಿ ಪಾಠ ಪ್ರವಚನ ನೀಡಿದ ಮಾರ್ಗದರ್ಶಕರಾದ ಪ್ರೊ: 'ಬಿ.ಎಲ್. ನಾಗಭೂಷಣ ಸ್ವಾಮಿ, ಡಾ. ಎಚ್.ಎಸ್. ರಾಘವೇಂದ್ರ, ರಾವ್ ಜಿ.ಆರ್. ರಾಮಮೂರ್ತಿ ಮತ್ತು ಈಗಾಗಲೇ ಉಲ್ಲೇಖಿಸಿರುವ ಕನ್ನಡ ವಿಶ್ವವಿದ್ಯಾಲಯದ ಗುರುವೃಂದಕ್ಕೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಸಹಕರಿಸಿ, ಅಧ್ಯಯನದ ಸುಸೂತ್ರತೆಗೆ ಕಾರಣರಾದ ಮಲ್ಲಿಕಾರ್ಜುನ ಮಣೇನೂರು, ವಿಶ್ವನಾಥ ಬದಿಕಾನ, ಅಶೋಕ ಆಳ್ವ, ಕಿಶೋರ್ ಕುಮಾರ ಶೇಣಿ, ಮಮತಾ ಜಿ ಸಾಗರ ಅವರುಗಳಿಗೆ.

ಇಲ್ಲಿಯ 'ವೈಜ್ಞಾನಿಕ ಶೋಧಗಳು' ಅಧ್ಯಾಯ ಬರೆಯಲು ನೆರವಾದವರು ಕಮಲಾಪುರದ ವೈದ್ಯರಾದ ಡಾ: ಮನೋಹರ ಅವರು, ಬಿಡುವಿಲ್ಲದ ಕೆಲಸ ಕಾರ್ಯಗಳ ಮಧ್ಯೆಯೂ ತಾಳ್ಮೆಯಿಂದ ವಿಜ್ಞಾನವನ್ನು ಸರಳವಾಗಿ ನನಗೆ ಬೋಧಿಸಿದ ಅವರಿಗೆ.

ಕನ್ನಡ ವಿಶ್ವವಿದ್ಯಾಲಯದ ಎಲ್ಲಾ ಗುರುವೃಂದಕ್ಕೆ ಮತ್ತು ಒಂದೇ ಮಾತಿನಲ್ಲಿ ಹೇಳಬೇಕಾದರೆ ನಮ್ಮ ವಿಶ್ವವಿದ್ಯಾಲಯದ ಎಲ್ಲಾ 'ಕುಟುಂಬ ವರ್ಗ'ಕ್ಕೆ.

ಈ ಅಧ್ಯಯನದಲ್ಲಿ ಪಾಲ್ಗೊಂಡವರು ಹೊಸಪೇಟೆಯ 'ಗಂಡು ಜೋಗಮ್ಮ'ರು. ಈ ಅಧ್ಯಯನದ ಪ್ರಯೋಜನವು ಕೇವಲ ನನ್ನ ಕುತೂಹಲವನ್ನು ತಣಿಸದೆ ಕನಿಷ್ಠ ಪಕ್ಷ ಯಾವುದಾದರೊಂದು ನೆಲೆಯಲ್ಲಾದರೂ ಅವರಿಗೆ

ಸಹಾಯಕವಾಗಬೇಕೆಂದು ಭಾವಿಸಿದ್ದೇನೆ. ಅಧ್ಯಯನದ ಸಂದರ್ಭದಲ್ಲಿ ಅನೇಕರು ತಮ್ಮ ಮನದಳಲನ್ನು, ಸಂಭ್ರಮವನ್ನು ಮುಕ್ತವಾಗಿ ನನ್ನಲ್ಲಿ ತೋರ್ಪಡಿಸಿ ಕೊಂಡಿದ್ದಾರೆ. ಅಧ್ಯಯನಕ್ಕೆ ಬೆನ್ನೆಲುಬಾಗಿ ನಿಂತ ಅವರಿಗೆ;

ಕ್ಲಪ್ತ ಕಾಲದಲ್ಲಿ ಬೆರಳಚ್ಚು ಮಾಡಿ ಕೊಟ್ಟ ಕುಮಾರಿ ಪರಿಮಳ ಹಾಗೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೆ;

— । ವಂದಿಸುವುದಾದಿಯು । —

ಅಧ್ಯಾಯ – 1

1.1 ಮುಗಿಲು:

ಮಾನವ ಸಮುದಾಯ ಇಂದು ಆದರ್ಶ ಸ್ಥಿತಿಯೊಂದರಲ್ಲಿ ಮಾತ್ರ ಒಂದಾಗಿದೆಯೇ ಹೊರತು ವಾಸ್ತವದಲ್ಲಿ ಸೂಕ್ಷ್ಮಾತಿಸೂಕ್ಷ್ಮವಾಗಿ ಒಡೆದು ಹೋಗಿದೆ. ಪ್ರಕೃತಿಯ ರಾಚನಿಕ ನೆಲೆಯಲ್ಲಿ ವಾನರನು 'ವಾ' ರಹಿತ ನರನಾದುದೇ ಒಂದು ವಿಸ್ಮಯ. ಹೀಗೆ 'ವಾ' ರಹಿತವಾಗುವ ಈ ಸ್ಥಿತಿಯೇ ಸೃಷ್ಟಿಯೊಡನೆ ನಿರಂತರ ಸಂಘರ್ಷಕ್ಕಿಳಿಯುವ ಸಾಧನೆಯಾಗಿತ್ತು. ಒಂದೆಡೆಗೆ ಅದು ನಿರಂತರವಾದ ಕ್ರಿಯಾಶೀಲತೆಗೆ ಅನುವಾಯಿತೆಂದರೆ ಮತ್ತೊಂದೆಡೆಗೆ ಅದು ಅಸಹಜತೆಗಳ ಕಗ್ಗಂಟೂ ಆಗ ತೊಡಗಿತು. ಇದಕ್ಕೆ ಕಾರಣ ಈ ಅಸಹಜತೆ 'ವಾ' ನರ ನರನಾಗುವ ಹಂತದಲ್ಲಿಯೇ ಇತ್ತು.

ಇಂದು 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದು ಪ್ರಣಾಳಿಕೆಯಾಗಿದೆ. ಒಂದು ವೇಳೆ ಜಾತಿಯೆಂದಿದ್ದರೆ ಗಂಡು ಮತ್ತು ಹೆಣ್ಣು ಜಾತಿಗಳೆರಡೇ ಎನ್ನುವ ವಾಸ್ತವತೆಗೆ ನರ ಸಮುದಾಯದಲ್ಲಿ ಕಳಕಳಿಯಿದೆ. ಈ ಹೆಣ್ಣು ಮತ್ತು ಗಂಡೆಂಬ ವಿಭಜನೆ ಕೂಡ 'ಆತ್ಮ' ದ ನೆಲೆಯಲ್ಲಿ ಸಹಜವಲ್ಲವೆಂಬುದು ಜೇಡರ ದಾಸಿಮಯ್ಯನ ಅನುಭವ ಮತ್ತು ಅನುಭಾವ. ಆತ ಹೇಳುತ್ತಾನೆ: —

"ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವ ಆತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ"

ಆತ ಹೇಳುವ ಅಂತರಿಕ ಆತ್ಮ ಮಾತ್ರವೇ ಹೆಣ್ಣೂ ಅಲ್ಲ, ಗಂಡೂ ಅಲ್ಲದೆ ಅದ್ವೈತವಾಗಿರುವುದು ಆಧ್ಯಾತ್ಮಿಕ ಚಿಂತನೆ. ಬಾಹ್ಯರೂಪದಲ್ಲಿಯೇ ಈ 'ಅದ್ವೈತ' ವ್ಯಕ್ತಗೊಳ್ಳುವುದು ವಸ್ತುಸ್ಥಿತಿ. ವಿಪರ್ಯಾಸವಿರುವುದು ಇಲ್ಲಿಯೇ.

ಪ್ರಸ್ತುತ ಪ್ರಬಂಧದಲ್ಲಿ ಈ ದೈಹಿಕ 'ಅದ್ವೈತ ಸ್ಥಿತಿ' ಯೊಂದರ ಕುರಿತು ಅಧ್ಯಯನಿಸಲಾಗಿದೆ.

1.2 ದೈಹಿಕ ಅದ್ವೈತದ ಗ್ರಹಿಕೆಗಳು:

ಈಗಾಗಲೇ ಹೇಳಿರುವಂತೆ ನಮ್ಮಲ್ಲಿ ಆಧ್ಯಾತ್ಮಿಕ, ಮಾನಸಿಕ ಅದ್ವೈತದ ಗ್ರಹಿಕೆಯೊಂದಿದೆ. ಬೈಬಲಿನಲ್ಲಿ ಉಲ್ಲೇಖಿತವಾಗುವ ಆಡಮ್ ಮತ್ತು ಈವ್ ರ ವಿವರಣೆಯೂ ಈ ಆಧ್ಯಾತ್ಮಿಕ ಅದ್ವೈತದ ಗ್ರಹಿಕೆಯೇ. 'ಏದೆನ ತೋಟದ ಹಣ್ಣನ್ನು ತಿನ್ನುವವರೆಗೆ ಅವರಿಬ್ಬರೂ ಬೆತ್ತಲೆಯಾಗಿದ್ದರೂ ಪರಸ್ಪರ ನಾಚಿಕೊಳ್ಳಲಿಲ್ಲ. ಆದರೆ ಯಾವಾಗ 'ಏದೆನ ತೋಟದ ಹಣ್ಣನ್ನು ತಿಂದರೋ ಆಗ ತಮ್ಮ ದೇಹಾವಲೋಕನಕ್ಕೆ ತೊಡಗಿ, ಅಂಜೂರದ ಎಲೆಗಳನ್ನು ದೇಹಕ್ಕೆ ಸುತ್ತಿಕೊಂಡರು. ಹೀಗೆ ಹಣ್ಣನ್ನು ತಿನ್ನುವ ಪೂರ್ವದ ಅವರ ಮಾನಸಿಕ ಗ್ರಹಿಕೆ 'ಅದ್ವೈತ' ವಾದುದು. ಶರಣರ ವಚನಗಳು, ವೇದೋಪನಿಷತ್ತುಗಳು, ಭಗವದ್ಗೀತೆಗಳೆಲ್ಲವೂ ಈ ಅದ್ವೈತವನ್ನು ಸಾರುತ್ತಲೇ ಇವೆ. ಹೀಗೆ 'ಆಧ್ಯಾತ್ಮಿಕ ಅದ್ವೈತ' ಕ್ಕೆ ಮಹತ್ವ ನೀಡಲಾಗಿದೆ.

ಆದರೆ . ಶಕ್ತಿ ಅದ್ವೈತವನ್ನು ಕೊಂಡಾಡುವ ಚಿಂತಕರು 'ದೈಹಿಕ ಅದ್ವೈತ' ವನ್ನು ಹೇಳುವುದಕ್ಕೆ ಹಿಂಜರಿಯುತ್ತಾರೆ. ಹೀಗೆ ಹೇಳುವಾಗ ಅರ್ಧನಾರೀಶ್ವರರ ಕಲ್ಪನೆ ಎದುರಾಗುತ್ತದೆಯಾದರೂ ಅದು ಕೂಡಾ ಆಧ್ಯಾತ್ಮಿಕ ಪರಿಭಾಷೆಯೇ ಹೊರತು ಇಲ್ಲಿ ಹೇಳುವ 'ದೈಹಿಕ ಅದ್ವೈತ' ಕ್ಕೆ ಸಂಬಂಧಿಸಿದುದಲ್ಲ. ಹಾಗಾದುದರಿಂದ 'ದೈಹಿಕ ಅದ್ವೈತ' ವನ್ನು ಅಧ್ಯಾತ್ಮಿಕ ನೆಲೆಗಟ್ಟಿನಲ್ಲಿಯೇ ವಿವರಿಸಿಕೊಳ್ಳಬೇಕಾಗುತ್ತದೆ.

ಪಾರಿಭಾಷಿಕವಾಗಿ ಬಳಸಿದ ಈ 'ದೈಹಿಕ ಅದ್ವೈತ' ವನ್ನು ನಾನೀಗ ಸ್ಥಳೀಯವಾಗಿ 'ಗಂಡು ಜೋಗಮ್ಮ' ರೆಂದು ಗುರುತಿಸುತ್ತೇನೆ. ಈ ಪದವನ್ನು ಹೊಸಪೇಟೆ ತಾಲೂಕಿನ ವ್ಯಾಪ್ತಿಯಿಂದಾಚೆಗೂ ಎಳೆಯಬಹುದಾದ ಸಾಧ್ಯತೆಯಿದೆಯಾದರೂ ಖಚಿತತೆಗಾಗಿ ಹೊಸಪೇಟೆ ತಾಲೂಕಿಗಷ್ಟೇ ಸೀಮಿತಗೊಳಿಸಿದ್ದೇನೆ.

ಮತ್ತೆ 'ದೈಹಿಕ ಅದ್ವೈತ' ದ ಪರಿಕಲ್ಪನೆಯಿಂದ ಮುಂದೆ ಸಾಗಬಹುದಿದೆ. ಪರಿಸರದಲ್ಲಿ ಗಂಡು — ಹೆಣ್ಣು ಗಳೆಂಬ ಕನಿಷ್ಠತಮ ಘಟಕಗಳಿವೆ. ಗಂಡಿಗೆ

ಲ್ಲೇ ಆದ ವಿಶಿಷ್ಟ ಲಕ್ಷಣಗಳಿವೆ. ಹೆಣ್ಣಿಗೂ ನಿರ್ದಿಷ್ಟ ಲಕ್ಷಣಗಳಿವೆ. ವೈಜ್ಞಾನಿಕವಾಗಿ ಹೇಳಬೇಕಾದರೆ ಗಂಡಸರಲ್ಲಿ XY ಕ್ರೋಮೋಸೋಮುಗಳಿದ್ದರೆ, ಹೆಂಗಸರಲ್ಲಿ XX ಕ್ರೋಮೋಸೋಮುಗಳಿರುತ್ತವೆ. ಹೀಗೆ ಅವೆರಡೂ ಪ್ರತ್ಯೇಕ ಲೋಕಗಳಾಗಿ ಪರಸ್ಪರ ಆಕರ್ಷಣೆ ವಿಕರ್ಷಣೆಗೆ ಒಳಗಾಗುತ್ತವೆ.

ಆದರೆ 'ದೈಹಿಕ ಅದ್ವೈತ' ಇವರಿಗಿಂತ ಭಿನ್ನವಾದುದು. ಅಲ್ಲಿ ಹೆಣ್ಣೂ ಅಲ್ಲದ ಗಂಡೂ ಅಲ್ಲದ ಲಕ್ಷಣಗಳಿರುತ್ತವೆ. 'ಏಕಕಾಲದಲ್ಲಿ ಗಂಡು ಹೆಣ್ಣಾಗುವ ಹೆಣ್ಣು ಗಂಡಾಗುವ ಒಂದು ಸಂಕೀರ್ಣ ಸ್ಥಿತಿಯಿದು. ಈಗಾಗಲೇ ಹೇಳಿರುವಂತೆ ನಮ್ಮ ಲೋಕದಲ್ಲಿ ಆಧ್ಯಾತ್ಮಿಕ ಅದ್ವೈತಕ್ಕೆ ಮಹತ್ವವಿರುವುದಾದರೂ ಈ 'ದೈಹಿಕ ಅದ್ವೈತ'ಕ್ಕೆ ಮಹತ್ವದ ಮಾತಿರಲಿ ಗುರುತಿಸುವಿಕೆಯೇ ಇಲ್ಲವಾಗಿದೆ. ನರ ಲೋಕದ ಸಹಜ ಸ್ಥಿತಿಯಲ್ಲಿ ಈ 'ಅದ್ವೈತ' ಅಪವಾದವಾಗಿರುವುದಾದರೂ ಇದರ ಅಧ್ಯಯನ ಕುತೂಹಲಕರವಾದುದು.

1.3 ಗಂಡು ಜೋಗಪ್ಪರು:

ಈಗಾಗಲೇ ಹೇಳಿರುವಂತೆ 'ದೈಹಿಕ ಅದ್ವೈತ' ಎಂಬ ಪರಿಭಾಷೆಯನ್ನು ಪ್ರಸ್ತುತ ಅಧ್ಯಯನದಲ್ಲಿ ಗಂಡು ಜೋಗಪ್ಪಗಳೊಂದಿಗೆ ಗುರುತಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲೆಲ್ಲಾ ಇದು ರೂಢಿಯಲ್ಲಿರುವ ಪದ. ಹೆಂಗಸರಂತೆ ಇವರು ಸೀರೆ ಕುಪ್ಪಸ ಧರಿಸಿ ಒನಪು ವೈಯ್ಯಾರ ತೋರಿಸುತ್ತಿರುತ್ತಾರೆ. ಆದರೆ ಗಂಡಸರ ಅಸಹಜವಾದ ಶಾರೀರಿಕ ಆಕೃತಿಯಿಂದ, ಇಲ್ಲವೇ ಸ್ವರದಿಂದ ಇವರು ಸುಲಭವಾಗಿಯೇ ಇವರನ್ನು ಗುರುತು ಹಿಡಿಯಬಹುದು.

[illegible], ಜೋಗತಿಯರು, ಜೋಗಪ್ಪಗಳು ಮೊದಲಾದ ಪುರಾತನ ಪದ್ಧತಿಗಳು ಅಸ್ತಿತ್ವದಲ್ಲಿರುವ ಈ ತಾಲೂಕಿನಲ್ಲಿ ಇವರನ್ನು ಪ್ರತ್ಯೇಕವಾಗಿ ಗುರುತಿಸುವ ಸಲುವಾಗಿ ಗಂಡುಜೋಗಪ್ಪರೆಂದು ಕರೆಯಲಾಗುತ್ತದೆ. ಈ ಪದವೇ ವಿಶಿಷ್ಟವಾಗಿ ಸಮ್ಮಿಲನಗೊಂಡಿರುವಂತಹದು.

ಹೆಣ್ಣು ಜೋಗಮ್ಮರು ಪ್ರತ್ಯೇಕವಾಗಿಯೇ ಇರುವುದರಿಂದ, ಇವರು ಗಂಡಸರೇ ಆಗಿರುವುದರಿಂದ ಗಂಡು ಮತ್ತು ಜೋಗಮ್ಮಗೆಂಬುದು ಗ್ರಹಿತಾರ್ಥ.

ಖೋಜಾ, ಛಕ್ಕ, ಹಿಜಡಾ, ಗಾಂಡೂ, ಮೊದಲಾದವು ಗಂಡು ಜೋಗಮ್ಮ ಪದಕ್ಕೆ ಸಂವಾದಿಯಾದ ಅನ್ಯದೇಶೀಯ ಪದಗಳು; 'ಖೋಜಾ' ಮೂಲತಃ ಮರಾಠಿ ಪದವಾಗಿದ್ದು ಕೊಜ್ಜ, ಕೊಜ್ಜೆಯಾಗುವುದರ ಮೂಲಕ ಕನ್ನಡದಾಗಿದೆ. ಸಂಸ್ಕೃತದಲ್ಲಿ ಕ್ಲೀಬ, ವರ್ಷಧರ, ಷಂಡಕ, ನಪುಂಸಕ, ವಧ್ರಿ, ಮೊದಲಾದ ಪದಗಳಿವೆ. ಇದರೊಂದಿಗೆ ಮಹಾಭಾರತದ ಶಿಖಂಡಿ, ಬೃಹನ್ನಳೆಗಳು ಪರಿಚಿತರೇ ಆಗಿದ್ದಾರೆ. ಅಥರ್ವಣ ವೇದದಲ್ಲಿ ಇವರನ್ನು ವಧ್ರಿಗಳಾದರೆ, ಶತಪಥ ಬ್ರಾಹ್ಮಣವು ಇವರನ್ನು 'ಉದಂ ಕೋದಂನ ಪುರುಷರು' ಎಂಬ ಉಲ್ಲೇಖಗಳು ಬರುತ್ತವೆ. ಹಾಗೆಯೇ ವಾಜಸನೇಯ ಸಂಹಿತೆ, ಬೌದ್ಧಧರ್ಮ, ಜೈನ ಧರ್ಮಗಳಲ್ಲಿಯೂ ಇವರ ಉಲ್ಲೇಖಗಳಿವೆ. ಆದರೆ ಇಂಗ್ಲಿಷನಲ್ಲಿ 'eunuch' ಎನ್ನುವುದು ಇದಕ್ಕೆ ಸಂವಾದಿಯಾದ ಪದ.

1.4 ಅಧ್ಯಯನದ ಸಮೀಕ್ಷೆ:

ಇವರ ಕುರಿತು ಅಧ್ಯಯನಗಳಾಗಿರುವುದು ತುಂಬ ಕಡಿಮೆ. ಅದರಲ್ಲಿಯೂ ಕರ್ನಾಟಕಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಅಧ್ಯಯನ ನಡೆದಿರುವುದು ಇದುವರೆಗೆ ನನ್ನ ಗಮನಕ್ಕೆ ಬಂದಿಲ್ಲ. ಆದರೆ ಇಂಗ್ಲಿಷನಲ್ಲಿ ಈ ಕುರಿತು ಅಧ್ಯಯನಗಳಾಗಿವೆ. ಅಮೇರಿಕನ ಮಾನವ ಶಾಸ್ತ್ರಜ್ಞೆಯಾದ ಸೆರಿನಾ ನಂದೀ ಭಾರತೀಯ ನಪುಂಸಕರ ಬಗೆಗೆ ಅಧ್ಯಯನ ಮಾಡಿದ್ದಾರೆ. ಇದೇ ರೀತಿ ದೆಹಲಿ ವಿಶ್ವವಿದ್ಯಾಲಯವು ನಡೆಸಿದ ಅಧ್ಯಯನವೊಂದರಲ್ಲಿ 89 ಮಂದಿ ನಪುಂಸಕರುಗಳ ಅಧ್ಯಯನವಿದೆ. ಇತ್ತೀಚೆಗೆ ದೆಹಲಿಯ ಕುರಿತು 'City of Djinns' ಎಂಬ ಪುಸ್ತಕ ಪ್ರಕಟವಾಗಿದ್ದು (1993 ರಲ್ಲಿ) ಅದರಲ್ಲಿ ಪ್ರಾಸಂಗಿಕವಾಗಿ ಇವರ ಕುರಿತು ಅಧ್ಯಯನ ಮಾಡಲಾಗಿದೆ. ಈ ಪುಸ್ತಕದ ಲೇಖಕರೂ ಕೂಡ ಭಾರತೀಯ ನಪುಂಸಕರ ಬಗೆಗೆ ಹೆಚ್ಚಿನ ಅಧ್ಯಯನಗಳಾಗಿಲ್ಲ ಎಂದು ತಿಳಿಸುತ್ತಾರೆ.

ಕರ್ನಾಟಕದಲ್ಲಿ ಈ ಕುರಿತು ಅಧ್ಯಯನಗಳಾಗಿಲ್ಲವೆಂದು ಮೇಲೆ ಹೇಳಲಾಯಿತು. ಆದರೆ ಪ್ರಾಸಂಗಿಕವಾಗಿ ಕನ್ನಡ ಪತ್ರಿಕೆಗಳಲ್ಲಿ ಬೆರಳೆಣಿಕೆಯಷ್ಟು ಲೇಖನಗಳು ಪ್ರಕಟವಾಗಿರುವುದು ನನ್ನ ಗಮನಕ್ಕೆ ಬಂದಿದೆ. ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಎನ್.ಆರ್. ಪಾಟೀಲ(22.8.1993) ರವರು 'ಜೋಗಜಗಳ ಯಾತನೆಯ ಬದುಕು' ತರಂಗ ವಾರ ಪತ್ರಿಕೆಯಲ್ಲಿ ಅಹುಜ ರವರ(ಫೆ.27,1993) ''ಏಡ್ಸ್ ಹರಡುವ ಹಿಜಂಡಿ ಪ್ರಪಂಚ' ನನ್ನ ಗಮನಕ್ಕೆ ಬಂದಿರುವ ಲೇಖನಗಳು. ಬಿಡಿ ಲೇಖನಗಳು ಹಾಗೂ ಸಾಂದರ್ಭಿಕ ಪ್ರತಿಕ್ರಿಯೆಗಳೂ ಆದ ಈ ಲೇಖನಗಳು ಸ್ಪಷ್ಟವಾಗಿ ಅಧ್ಯಯನದ ಉದ್ದೇಶವನ್ನು ಹೊಂದಿದವಲ್ಲ. 1

1.5 ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

'ದೈಹಿಕ ಅಧ್ವೈತ' ವನ್ನು ಕೀಳರಿಮೆಯಾಗಿ ಪರಿಗಣಿಸಲಾಗುತ್ತಿದೆ. ಈ ಕೀಳರಿಮೆಯಿಂದಲೇ ಇವರ ಬಗೆಗೆ ಅಧ್ಯಯನಗಳಾಗಿಲ್ಲ. ಕನ್ನಡದಲ್ಲಿ ಪ್ರಕಟಿತವಾದ ಲೇಖನಗಳೂ ಕೂಡ ಇವರನ್ನು 'ಸಮಸ್ಯೆ' ಯೆಂದೇ ಪರಿಗಣಿಸಿವೆ. ನಮ್ಮಲ್ಲಿ ಕೆಲವೊಂದು 'ವಿಷಯ' ಗಳನ್ನು ಒಮ್ಮೆ ಸಮಸ್ಯೆ ಎಂದು ಗುರುತಿಸಿದ ಮೇಲೆ ಆದರ ಬಗೆಗೆ ಕಾಳಜಿ ವಹಿಸಲಾಗುವುದಿಲ್ಲ. ಕೊನೆಯ ವರೆಗೆ ಅದನ್ನು ಸಮಸ್ಯೆಯೆಂದೇ ಪರಿಗಣಿಸಿ ಉಲ್ಬಣಾವಸ್ಥೆಯಲ್ಲಿ ಪರಿತಪಿಸಲಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ನಗಣ್ಯವಾದ ಈ ಸಮುದಾಯವನ್ನು ಅಧ್ಯಯನಿಸಲು ಉದ್ದೇಶಿಸಲಾಗಿದೆ.

ಈಗಾಗಲೇ ಹೇಳಿರುವಂತೆ ಮೊದಲ ಬಾರಿಗೆ ನಿರ್ದಿಷ್ಟವಾದ ಉದ್ದೇಶದಿಂದ ಕನ್ನಡದಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗುತ್ತಿದೆ. ಅಧ್ಯಯನದ ಉದ್ದೇಶವು ವ್ಯಾಪಕವಾದುದಾದರೂ ವ್ಯಾಪ್ತಿಯ ನೆಲೆಯಲ್ಲಿ ಹೊಸಪೇಟೆ ತಾಲೂಕಿನ ವ್ಯಾಪ್ತಿಗೆ ಸೀಮಿತಗೊಳಿಸಲಾಗಿದೆ.

1.6 ಅಧ್ಯಯನ ವಿಧಾನ:

ಅಧ್ಯಯನದ ವ್ಯಾಪ್ತಿಗೆ ಸೇರಿರುವ ಹೊಸಪೇಟೆ ತಾಲೂಕು ಬಳ್ಳಾರಿ ಜಿಲ್ಲೆಗೆ ಸೇರುತ್ತದೆ. ತಾಲೂಕಿನ ಉತ್ತರ ಭಾಗಕ್ಕೆ ರಾಯಚೂರು, ದಕ್ಷಿಣಕ್ಕೆ ಸಂಡೂರು,

ಪೂರ್ವಕ್ಕೆ ಬಳ್ಳಾರಿ ಮತ್ತು ಪಶ್ಚಿಮಕ್ಕೆ ಹಗರಿ ಬೊಮ್ಮನ ಹಳ್ಳಿ, ವಾಯುವ್ಯ ಮತ್ತು ಈಶಾನ್ಯದಲ್ಲಿ ಗಂಗಾವತಿ ಮತ್ತು ಸಿರಗುಪ್ಪ ತಾಲೂಕುಗಳಿವೆ. ಜಿಲ್ಲಾ ಕೇಂದ್ರವಾದ ಬಳ್ಳಾರಿ ಇಲ್ಲಿಗೆ 61 ಕಿ.ಮೀ.ಗಳಾದರೆ ರಾಜಧಾನಿಯಾದ ಬೆಂಗಳೂರು 336 ಕಿ.ಮೀ ಅಂತರದಲ್ಲಿದೆ.

ಹೊಸಪೇಟೆ ತಾಲೂಕಿನಲ್ಲಿ ಇದೀಗ ಅಸ್ತಿತ್ವದಲ್ಲಿ 72 ಹಳ್ಳಿಗಳಿವೆ. ಹೆಚ್ಚಿನ ಹಳ್ಳಿಗಳಲ್ಲಿ ಕನಿಷ್ಠ ಒಬ್ಬರಾದರೂ ಗಂಡು ಜೋಗಮ್ಮರು ಕಂಡು ಬರುತ್ತಾರೆ. ತಾಲೂಕಿನ ಪ್ರತಿಯೊಂದು ಹಳ್ಳಿಯನ್ನೂ ನಿಕಟವಾಗಿ ಪರಿಚಯಿಸಿರುವ ಅನುಭವ ಇರುವುದಾದರೂ, ಎಲ್ಲ ಗಂಡು ಜೋಗಮ್ಮರಿಂದಲೂ ಮಾಹಿತಿ ಸಂಗ್ರಹಿಸಲಾಗಿಲ್ಲ. ಇದಕ್ಕೆ ಸ್ಪಷ್ಟವಾದ ಕಾರಣಗಳೆಂದರೆ —

ಇದು ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಸಿದ್ಧಗೊಳಿಸುವ ಪ್ರಬಂಧ. ನಿರ್ದಿಷ್ಟಾವಧಿಯಲ್ಲೇ ಪ್ರಬಂಧವನ್ನು ಮಂಡಿಸಬೇಕಾದ ನಿಯಮಾವಳಿಗಳಿರುವುದರಿಂದ ಹಾಗೂ —

ಗಂಡು ಜೋಗಮ್ಮರು ತಮ್ಮ ಕುಟುಂಬದೊಂದಿಗೆ ಇರುವುದು ಬಹಳ ಅಪರೂಪ. ಹುಲಿಗೆಯೋ, ಸವದತ್ತಿಯೋ ಅಥವಾ ಯಾವುದಾದರೂ ಗುರು ದೇಗುಲಗಳಿಗೆ ಸಂಚರಿಸುತ್ತಲೇ ಇರುತ್ತಾರೆ. ಇಲ್ಲವೇ ಊರಾಡುವುದಕ್ಕೆ ಹೋಗಿರುತ್ತಾರೆ. ಅವರ ಬಗೆಗೆ ಹೆಚ್ಚಿನ ನಿಗಾ ಅವರಂಥವರ ವಿನಾ ಬೇರೆಯವರು ವಹಿಸುವುದಿಲ್ಲವಾದುದರಿಂದ ಮಾಹಿತಿ ಸಂಗ್ರಹಿಸುವುದೂ ಕಷ್ಟಕರವೇ. ಇವರಲ್ಲಿ ಹೆಚ್ಚಿನವರು ಹೊಸಪೇಟೆ, ಹುಲಿಗೆ ನಿತ್ಯ ಬರುವವರಾದುದರಿಂದ ಆ ಸ್ಥಳಗಳಲ್ಲಿ ಸಂದರ್ಭಾನುಸಾರ ಸಂದರ್ಶನ ಮಾಡಲಾಗಿದೆ. ಹಾಗೆಯೇ ಜೋಗಮ್ಮರಿಂದಲೂ (ಹೆಣ್ಣು) ಇವರ ಬಗೆಗೆ ಅವರ ಅಭಿಪ್ರಾಯವನ್ನು ಪಡೆದುಕೊಳ್ಳಲಾಗಿದೆ.

ಈಗಾಗಲೇ ಹೇಳಿರುವಂತೆ ಗಂಡು ಜೋಗಮ್ಮರು ಸಂಚಾರಿಗಳಾಗಿರುವುದರಿಂದ ಕೇವಲ ಹೊಸಪೇಟೆಯವರನ್ನು ಮಾತ್ರ ಪರಿಗಣಿಸಲಾಗಿದೆ ಎಂದೂ ನಿಖರವಾಗಿ ಹೇಳುವಂತಿಲ್ಲ. ರಾಯಚೂರು, ಗಂಗಾವತಿ, ಆಂಧ್ರಪ್ರದೇಶದವರೂ ಈ ಅಧ್ಯಯನದ ವ್ಯಾಪ್ತಿಗೆ ಸೇರಿಕೊಂಡಿದ್ದಾರೆ.

ಹೀಗೆ ಅಧ್ಯಯನಿಸುವಾಗ ಇವರ ಸಾಮಾಜಿಕ ಹಿನ್ನೆಲೆಯನ್ನಷ್ಟೇ ಪರಿಗಣಿಸಲಾಗಿದೆ. ಶಾಸ್ತ್ರೀಯವಾಗಿ ಹೇಳುವುದಿದ್ದರೆ ಸಮಾಜ ಶಾಸ್ತ್ರೀಯ ವಿಧಾನವನ್ನು ಅಳವಡಿಸಿ ಕೊಳ್ಳಲಾಗಿದೆ. ಗಂಡು ಜೋಗಮ್ಮರು ತಮ್ಮದೇ ಆದ ಜಾನಪದ ಸಾಹಿತ್ಯವನ್ನು ಹೊಂದಿರುವರಾದರೂ ಪ್ರಸ್ತುತ ಅಧ್ಯಯನಕ್ಕೆ ಅದು ಹೊರತಾಗಿದೆ. ಈ ಕ್ಷೇತ್ರದಲ್ಲಿ ಇದು ಮೊದಲ ಅಧ್ಯಯನವಾದುದರಿಂದಲೂ, ಕಾಲಮಿತಿಯಿಂದಲೂ ಇಷ್ಟು ಸೀಮಿತತೆಯನ್ನು ಮಾಡಿಕೊಳ್ಳಬೇಕಾಯಿತು.

ಮುಂದಿನ ಅಧ್ಯಾಯದಲ್ಲಿ ಗಂಡು ಜೋಗಮ್ಮರನ್ನು ನಿರ್ದೇಶಿಸುವ ಪದಗಳನ್ನು ಕೋಶಗಳ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. [2]

ಅಧ್ಯಾಯ — 2

ಗಂಡು ಜೋಗವ್ವರ ಹಿನ್ನೆಲೆ:

2.1 ಕೋಶಗಳು ನೀಡಿರುವ ಅರ್ಥ

2.2 ಕನ್ನಡ ಕಾವ್ಯಗಳ ಉಲ್ಲೇಖಗಳು

2.3 ಅಂತಾರಾಷ್ಟ್ರೀಯ — ರಾಷ್ಟ್ರೀಯ — ಸ್ಥಳೀಯ ಇತಿಹಾಸ.

2.1 ಕೋಶಗಳು ನೀಡಿರುವ ಅರ್ಥ :

ಇಲ್ಲಿಯವರೆಗೆ ಹೊಸಪೇಟೆ ತಾಲೂಕಿನಲ್ಲಿ ರೂಢಿಯಲ್ಲಿರುವ ಗಂಡು ಜೋಗವ್ವ ಪದವನ್ನು ಬಳಸಲಾಗಿದೆ. ಆದರೆ ಉತ ಗ್ರಂಥಗಳಲ್ಲಿ ಇವರನ್ನು 'ಖೋಜಾ'ಗಳೆಂದು ದಾಖಲಿಸಲಾಗಿದೆ. ಶಿಖಂಡಿ, ನಪುಂಸಕ ಪದಗಳೂ ಜನಪ್ರಿಯವಾಗಿವೆ. ಗಂಡು ಜೋಗವ್ವ ಪದವು ಯಾವುದೇ ಕನ್ನಡ ಗ್ರಂಥಗಳಲ್ಲಿಲ್ಲದಿರುವುದರಿಂದ ಇದಕ್ಕೆ ಸಂವಾದಿಯಾದ ಪದಗಳ ನಿಷ್ಪತ್ತಿಯನ್ನು ಇಲ್ಲಿ ಕಂಡುಕೊಳ್ಳಲಾಗುವುದು.

1) ಕಿಟೆಲ್ಲರ ಕನ್ನಡ – ಇಂಗ್ಲಿಷ್ ಕೋಶದಲ್ಲಿ ಕೊಜ್ಜ, ಖೋಜಾ, ಶಿಖಂಡಿ, ನಪುಂಸಕ, ಕ್ಲೀಬ, ಪದಗಳಿವೆ. ಕೊಜ್ಜ ಪದಕ್ಕೆ A eunuch who generally attire of woman ಎನ್ನುವ ಅರ್ಥವಿದೆ.

2) ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಕೋಶದಲ್ಲಿ ಕೊಜ್ಜೆ, ಖೊಜ್ಜ, ಖೋಜಾ, ಖೋಜೆ, ಖ್ವಾಜಾ, ಷಂಡ, ವರ್ಷಧರ, ಮೊದಲಾದ ಪದಗಳಿವೆ. (ವೇಶ್ಯೆಯ ಬಾಗಿಲು ಕಾಯುವ) ನಪುಂಸಕ ದಾಸ, ರಾಣಿವಾಸದ ದ್ವಾರಪಾಲಕರೆಂಬ ಅರ್ಥವಿದೆ.

ಅದೇ ಕೋಶದಲ್ಲಿ ಪುರುಷನೂ ಅಲ್ಲದ ಸ್ತ್ರೀಯೂ ಅಲ್ಲದ ವ್ಯಕ್ತಿ, ಗಂಡೂ, ಹೆಣ್ಣೂ ಅಲ್ಲದ ಮನುಷ್ಯ, ನಿರ್ವೀರ್ಯನಾದವನು, ದುರ್ಬಲ, ಬಲಹೀನ, ಎನ್ನುವ ಅರ್ಥಗಳನ್ನು ನಪುಂಸಕ ಪದಕ್ಕೆ ಕೊಡಲಾಗಿದೆ. ನಪುಂಸಕತ್ವವೆಂದರೆ ಪುರುಷನೂ ಅಲ್ಲದ ಸ್ತ್ರೀಯೂ ಅಲ್ಲದ ಸ್ಥಿತಿ, ಕ್ಲೀಬತ್ವ, ಷಂಡತನ ಎನ್ನಲಾಗಿದೆ.

ಕ್ಲೀಬ ಪದಕ್ಕೆ ಅಶಕ್ತನಾದವನು, ಕೈಲಾಗದವನು, ಹೇಡಿ, ಪುಕ್ಕ, ಸೋಮಾರಿ, ಪೆಂಗಳು, ಲೋಭಿ, ಕೃಪಣ ಮೊದಲಾದ ಅರ್ಥಗಳಿವೆ. ಕ್ಲೀಬಕ್ಕೆ ಸಂವಾದಿಯಾದ [illegible] ಕ್ಲೀವ.

ಡಾ: ಶಿವರಾಮ ಕಾರಂತರ ಸಿರಿಗನ್ನಡ ಅರ್ಥಕೋಶದಲ್ಲಿ ಕೊಜ್ಜ, ಶಿಖಂಡಿ, ನಪುಂಸಕ ಪದಗಳಿದ್ದು ಅದಕ್ಕೆ ಈ ಮೇಲಿನ ಅರ್ಥಗಳನ್ನೇ ನೀಡಲಾಗಿದೆ.

ಪಂಡಿತ ಜೆ.ಎಂ. ಕಮಲಯ್ಯನವರ 'ಕನ್ನಡ — ಕನ್ನಡ ಕಸ್ತೂರಿ ಕೋಶ'. ಗುರುನಾಥ ಜೋಶಿಯವರ 'ಕನ್ನಡ, ಕನ್ನಡ ಶಬ್ದಕೋಶ'. ಶಿವರಾಮ ಕಾರಂತರ 'ಸಿರಿಗನ್ನಡ ಅರ್ಥಕೋಶ'. ಗಳಲ್ಲಿ 'ಸೂಗ' ಎನ್ನುವ ಪದವನ್ನು ಕೊಜ್ಜ, ಮೋಜಾ ಪದಗಳಿಗೆ ಸಂವಾದಿಯಾಗಿ ಬಳಸಲಾಗಿದೆ 'ಸೂಗ' ವು ಅಚ್ಚಗನ್ನಡ ಪದವಾಗಿದೆ.

The Shorter Oxford English Dictionary on Historical Principles ನಲ್ಲಿ Eunach ಪದಕ್ಕೆ A eastrated male person, also such a person employed as a harem attendant or charged with important offairs of state ಎನ್ನುವ ಅರ್ಥ ಇದರ ಮೂಲ ಲ್ಯಾಟಿನ್ ಭಾಷೆಯ eunuehus ಪದ ಫ್ರೆಂಚ್, ಗ್ರೀಕ್ ಭಾಷೆಯಲ್ಲಿ ಸಮಾನಾರ್ಥಕ ಪದಗಳಿದ್ದು 'ಅಂತಃಪುರದ ಕಾವಲುಗಾರ' (bedehamber guard) ಎನ್ನುವ ಅರ್ಥವಿದೆ. eunueh ಪದವನ್ನು ವ್ಯುತ್ಪತ್ತಿಯಾನುಸಾರ ಸಾಧಿಸುವುದಾದರೆ ಹಾಸಿಗೆಯ ಕಾವಲುಗಾರ. eunuctize ಪದಕ್ಕೆ ಸಮಾನಾರ್ಥಕವಾಗಿ ಇಂಗ್ಲೀಷನಲ್ಲಿ fix, desex, alter, cut, castrate, emaseulate, geld, caponize, spay, cophoreetomize, heuter, epicene, sterilize, vasectomy ಮೊದಲಾದ ಪದಗಳಿವೆ. ಅದರಲ್ಲಿ eastrate ಪದವು ಗಂಡಸರಿಗೆ, emuseulate ಹೆಂಗಸರಿಗೆ, ~~geld ಕುದುರೆಗಳಿಗೆ, spay ಹೆಣ್ಣು ಪ್ರಾಣಿಗಳಿಗೆ alter ಮತ್ತು heuter~~ - ಪದಗಳು ಇಡೀ ಪ್ರಾಣಿ ಸಮುದಾಯಕ್ಕೆ, caponize ಹುಂಜಕ್ಕೆ, eunuch ಗಂಡಸರಿಗೆ, oralietomize ಹೆಂಗಸರಿಗೆ, Vaseletomize ಗಂಡಸರಿಗೆ fix ಪ್ರಾಣಿಗಳಿಗೆ, cut ಗಂಡು ಪ್ರಾಣಿಗಳಿಗೆ sterilize ಎತ್ತುಗಳಿಗೆ ಸಂಬಂಧಿಸಿದ ಪದಗಳಾಗಿವೆ.[1]

ಕುತೂಹಲಕರವಾದ ಅಂಶವೆಂದರೆ ಸಂಸ್ಕೃತ ಕೋಶಗಳಲ್ಲಿ ಶಿಖಂಡಿ ಪದಕ್ಕೆ ಆಧ್ಯಾತ್ಮಿಕ ಅರ್ಥ ಧ್ರಾಂತಿಯುಂಟುಮಾಡುವ ತಡೆಯುತ್ತದೆ. ಮುಕ್ತಿ ಹೊಂದಿದವನು; ಬಿಡುಗಡೆ ಪಡೆದವನು ಇತ್ಯಾದಿ ಅರ್ಥಗಳಿವೆ. ಅಂತೆಯೇ ವಿಷ್ಣುವಿನ ಪರ್ಯಾಯ ನಾಮಗಳಲ್ಲಿ ಶಿಖಂಡಿಯೂ ಒಂದು.

2.2 ಕನ್ನಡ ಕಾವ್ಯಗಳ ಉಲ್ಲೇಖಗಳು

2.2.1 ಸೂಳಿಲ ದೇಹ ತಾಳಂ ಕೊಜ್ಜೆಯರೆ ಬಹಳವ

- ಕೋಲ ಗೊಲ್ಲಾಳ ಚಿತ್ರ್ಯಸು.[2]

2.2.2 ಅಜ್ಜಯಿಲ್ಲದ ಮನೆಯು ಮಜ್ಜಿಗಿಲ್ಲದ ಊಟ।
ಕೊಜ್ಜೆಯಿಲ್ಲದರಮನೆಯಿವ್ವಾ ಮೂರು।
ಲಜ್ಜೆಗೇಡೆಂದ ಸರ್ವಜ್ಞ।।[3]

2.2.3 ದುರುಳ ಕೊಜ್ಜೆಯು ದೈತ್ಯರಂ ಕಾವಲಂಗೊಟ್ಟು

2.2.4 ಷಂಡ, ವಸುಂಧರ, ಈ ಇ ರಾಣಿವಾಸದ
ಕವಲೆ ಕೊಜ್ಜೆಯುನು.[4]

2.2.5 ಬಂದುಸಿರ್ದಳು ಬಾಗಿಲೊಳಿಪ್ಪ ಕೊಜ್ಜೆಯು ದೈತ್ಯರಿಗೆ.[5]

2.2.6 ಸವಿವಾತಿನಿಂ ನಾರಿಯರ ವಿಚಾರಿಸಿ ಕೊಜ್ಜೆಯರ ಕಳಿಸಿ[6]

2.2.7 ಅಬ್ಬ ಹೆಣ್ಣಿನ ಸಂಗ ಷಂಡನೇನು ಬಲ್ಲ

2.2.8 ಪುಂಡರಿಕಾಕ್ಷಿಯರೊಂದು ಪೋಷಿಸಿ ಮುಂ।
ಕೊಂಡು ಪೋರಿಕ್ಕ ಹಿಡಿಯಲು।
ಪುರಾಡವೋರಿಯುನಿಕೃತಿಯಿಲ್ಲದವನು ಶಿ।
ಖಂಡಿಯೆಂಬರು ನಿನ್ನಾಣೆ।।[7]

2.2.9 ಗಂಡುತನ ಮನೆ ನೆರಪದವಂಗಂಡನಲ್ಲ
ನೆಂತುಂ। ಷಂಡಂ [8]

2.2.10 ಗಂಡನೀನಿರಲ್ಕೆ ಕೇಳಿರಾಂ
ದಂಡು ಗೊಂಡು ಸುಮ್ಮನಿಹೆ ಶಿ।
ಖಂಡಿಂತೆಂಬ ನಾಮ ಸಾಮ್ಯವಾದುದಿಂದಿನಂ।।[9]

2.2.1 ನಪುಂಸಕ:

2.2.1.1 ಕ್ಲೀಬ: ವರ್ಷಧರ: ಷಂಡ: ಷಂಡಕ: ನಪುಂ
ಸಕ: ಈ ೫. ನಪುಂಸಕಂ [10]

2.2.1.2 ಷಂಡಂ ಕ್ಲೀಬನೆನೆ ನಪುಂಸಕನೆನಿಕ್ಕುಂ [11]

2.2.1.3 ಮತ್ತಮಾ ನಾರಕರೆಲ್ಲಂ ಹುಂಡ ಮುಂಡ
ಸಂಸ್ಥಾನರುಮತಿರೂಕ್ಷ ಕೃಷ್ಣವರ್ಣರುಮತಿದುರ್ಗಂಧರುಂ
ನಪುಂಸಕರುಂ [12]

2.2.1.4 ನಪುಂಸಕ ವ್ಯವಹರಿಸಬಲ್ಲನೇ ಅಂತ್ಯ [13]

2.2.1.5 ಅರ್ಜುನಂಗೀ ಸೂತತನವೆತ್ತಲು ನಪುಂಸಕ ವೇಷ ಮೀಕ್ಷಿಸಲು [14]

2.2.1.6 ಪುರುಷ ತನಕ ನಪುಂಸಕದಲಾ
ಧರಿಸ ಬಲ್ಲನೆ ಸಾಕು ದೇಹಾಂ
ತರವನಂಗೀಕರಿಸುವೆನಲಾ ತನ್ನ ಸುಡಲೆಂದ[15]

ಈ ಮೇಲಿನ ಪ್ರಯೋಗಗಳನ್ನು ಗಮನಿಸಿದರೆ ಇವರನ್ನು 'ಗಂಡಸುತನ' ದ ಹಿನ್ನೆಲೆಯಲ್ಲಿ ಅರ್ಥೈಸಿರುವುದು ಕಂಡು ಬರುತ್ತದೆ. 'ಗಂಡಸುತನ' ಕ್ಕಿರುವ ಅರ್ಥ 'ವೀರ್ಯವಂತಿಕೆಗೆ ಸಂಬಂಧಿಸಿದು. ಅದು ಸೃಷ್ಟಿ ಶಕ್ತಿಯೂ ಹೌದು ಬಲಾಢ್ಯತೆಯೂ ಹೌದು.

2.3 ಅಂತಾರಾಷ್ಟ್ರೀಯ – ರಾಷ್ಟ್ರೀಯ – ಸ್ಥಳೀಯ ಇತಿಹಾಸ:

2.3.1 ಅಂತಾರಾಷ್ಟ್ರೀಯ:

ಮಧ್ಯಪೂರ್ವ ಮತ್ತು ಚೀನಾ ದೇಶಗಳಲ್ಲಿ ಪ್ರಾಚೀನ ಕಾಲದಿಂದಲೂ ನಪುಂಸಕರು ಬಹು ಮುಖ್ಯವಾದ ಪಾತ್ರ ವಹಿಸುತ್ತಿದ್ದರು. ಅಲ್ಲಿ ಅವರು ನಿರ್ವಹಿಸುತ್ತಿದ್ದ ಎರಡು ಮುಖ್ಯ ಕರ್ತವ್ಯಗಳೆಂದರೆ ಅಂತಃಪುರಗಳಲ್ಲಿ ಕಾವಲುಗಾರರಾಗುವುದು ಮತ್ತು ಅರಮನೆವಾಳ್ತೆಯನ್ನು ನಿರ್ವಹಿಸುವುದು. ಬಹುಪತ್ನಿಯರಿರುವ ಅಂತಃಪುರಗಳಲ್ಲಿ ನಪುಂಸಕರನ್ನು ನೇಮಿಸಿಕೊಳ್ಳುವುದು ಆಗ ಅನಿವಾರ್ಯವಾಗಿತ್ತು. ಹೀಗೆ ಅಂತಃಪುರದ ನಿರ್ವಹಣೆಯನ್ನು ಕೈಗೆತ್ತಿಕೊಂಡ ನಪುಂಸಕರು ಸಹಜವಾಗಿಯೇ ರಾಜ್ಯಾಡಳಿತದಲ್ಲಿ ಪ್ರಭಾವ ಬೀರುವವರಾಗಿದ್ದರು. ಇದರಿಂದಾಗಿ ಅವರು ನಂಬಿಗಸ್ತರಾಗಿ, ಉನ್ನತ ಹುದ್ದೆಗಳನ್ನು ಪಡೆಯುತ್ತಿದ್ದರು. ರಾಜನ ಅಂಗರಕ್ಷಕ, ಆಪ್ತ ಸಲಹೆಗಾರ, ಮಂತ್ರಿ, ಸೇನಾಧಿಕಾರಿ, ನ್ಯಾಯಾಧಿಕಾರಿ ಹೀಗೆ ಹಲವು ಉನ್ನತ ದರ್ಜೆಗಳನ್ನು ಪಡೆಯ ಬಲ್ಲವರಾಗಿರುತ್ತಿದ್ದರು. ಕೆಲವರು ಉದ್ಯೋಗಾಸೆಯಿಂದಲೂ ಮತ್ತೆ ಕೆಲವರು ಶಿಕ್ಷೆಯ ಕಾರಣದಿಂದಲೂ ವೃಷಣ ಮರ್ದನ ಮಾಡಿಕೊಂಡು ನಪುಂಸಕರಾಗುತ್ತಿದ್ದರು. ಇನ್ನು ಕೆಲವು ಸಂದರ್ಭಗಳಲ್ಲಿ ಬಡ ತಂದೆ ತಾಯಂದಿರು ಇವರನ್ನು ಮಾರುವುದೂ ಇತ್ತು.[16] ಚೀನದಲ್ಲಿ ನಪುಂಸಕರು 'ಚೌ' ಚಕ್ರವರ್ತಿಯ ಕಾಲದಿಂದ(ಕ್ರಿ.ಪೂ 1122–221) ಹಾನತ್ಸಾಂಗ, ಮಿಂಗ, ಮತ್ತು ಸಂಗ ಸಾಮ್ರಾಜ್ಯಗಳ ಅವಧಿಯ ವರೆಗೆ ಜೆಪ್ಸು ಕಡಿಮೆ ಮಸಾಹತು ಶಾಹಿಯ ಕಾಲದವರೆಗೆ – ಪ್ರಮುಖ ಪಾತ್ರ ವಹಿಸುತ್ತಿದ್ದರು. ಆ ಕಾಲದಲ್ಲಿ ಅವರು ಅರಸನಿಗಿಂತಲೂ ಪ್ರಭಾವಶಾಲಿಗಳಾಗಿದ್ದು – ಚೀನಾ ಸಾಮ್ರಾಜ್ಯವನ್ನು ಪರಿಣಾಮಕಾರಿಯಾಗಿ ಆಳಿದರು. ಪರ್ಶಿಯಾದ ಅಕೆಮೆಂಡೀನ್ ಕಾಲದಲ್ಲಿ ನ್ಯಾಯಾಧಿಕಾರಿ ಹಾಗೂ ಇತರ ಅಧಿಕಾರಿಗಳಾಗಿ ಇವರ ನಿರ್ವಹಣೆ ಇತ್ತು. ರೋಮನ ಚಕ್ರಾಧಿಪತ್ಯದಲ್ಲಿ ಕ್ಲಾಡಿಯುಸ, ವಿಟೆಲಿಯುನ, ನೀರೋ ಮತ್ತು ಟಿಟನ ಆವರು ಇವರನ್ನು ಆಸ್ಥಾನದಲ್ಲಿ ನೇಮಿಸಿ ಕೊಂಡಿದ್ದರಿಂದಲೇ ಬೈಜಾಂಟೈನ ಸಾಮ್ರಾಜ್ಯದ ಪ್ರಭಾವಶಾಲಿ ದೊರೆಗಳೆನಿಸಿದರು. ಬೈಜಾಂಟೈನ ಕಾಲದ ಕಾನಸ್ಟಾಂಟಿನೋಪಲಿನ ಅನೇಕ ದೇಶಭಕ್ತರು ನಪುಂಸಕರೇ.

ಕ್ರಿ.ಶ. 750 ರ ಕಾಲದಲ್ಲಿ ಮುಸ್ಲಿಂ ಸಾಮ್ರಾಜ್ಯಗಳಲ್ಲಿಯೂ ರಾಜಕೀಯ ಮುತ್ಸದ್ದಿಗಳಾಗಿದ್ದ ಇವರು 20ನೇ ಶತಮಾನದ ಆಟೋಮನ ಸಾಮ್ರಾಜ್ಯದ ಕಾಲಕ್ಕೆ ಕಣ್ಮರೆಯಾದರು. ಇಟಲಿಯಲ್ಲಿ ಬಾಲಕರನ್ನು ವೃಷಣ ಮರ್ದನ ಮಾಡಿ ತಾರಕ ಸ್ವರದ ಗಂಡು ಗಾಯಕರನ್ನಾಗಿಸುವ ಕ್ರಿಯೆ 13ನೇ 'ಪೋಪ್‌ಲಿಯೋ (1878) ಅವರ ಕಾಲಕಷ್ಟೇ ಕೊನೆಗೊಂಡಿತು.

ಕ್ರಿಶ್ಚಿನ ಧರ್ಮ ಶಾಸ್ತ್ರದ ಅನುಸಾರ ಅನೇಕ ಕ್ರಿಶ್ಚಿಯನ್ನರು ವೃಷಣ ಮರ್ದನ ಮಾಡಿಕೊಂಡು ಪಾಪ ಪರಿಹಾರ ಮಾಡಿಕೊಳ್ಳುತ್ತಿದ್ದರು. ಮೂರನೇ ಶತಮಾನದಲ್ಲಿ ' ವೆಲಿಸಿ ' ಎನ್ನುವ ವೃಷಣ ಮರ್ದನ ಮಾಡಿಕೊಂಡ ಪಂಗಡವೊಂದಿದ್ದು ಈ ಮೂಲಕ ತಾವು ದೇವತಾನುಗ್ರಹಕ್ಕೆ ಪಾತ್ರರೆಂದು ನಂಬಿಕೊಂಡವರಾಗಿದ್ದರು. ಈ ಸಂದರ್ಭದಲ್ಲಿ ರೋಮಿನ ಮಹಾಮಾತೆಯ ಸಂಪ್ರದಾಯ(The Great Mother Cult)ವನ್ನು ಉಲ್ಲೇಖಿಸಬಹುದು.

ರೋಮಿನಲ್ಲಿ ಮೇಗ್ನಾ ಮೇಟರ(Magna Mater) ಎಂದು ಕರೆಯಲಾಗುವ ಈ ದೇವತೆ ಗ್ರೀಕ ಮೂಲದ ಸಿಬೆಲ. ಕ್ರಿ.ಪೂ. 204ನೇ ಏಪ್ರಿಲ 4 ರಂದು ರೋಮ ನಗರಕ್ಕೆ ಈಕೆಯ ಮೂರ್ತಿಯನ್ನು ತರಲಾಯಿತು. ಹಾಗೆ ತಂದವರು ರೋಮಿನ ಅಧಿಕಾರಿಗಳು. ಆಕೆಗೆ ದೇವಾಲಯವೊಂದನ್ನು ನಿರ್ಮಾಣ ಮಾಡುವುದರ ಮೂಲಕ ಗ್ರೀಕಿನ ರಾಷ್ಟ್ರೀಯ ದೇವತೆಯನ್ನಾಗಿಸಲಾಯಿತು.

ಇದಕ್ಕೆ ಸ್ವತಃ ವೃಷಣ ಮರ್ದನ ಮಾಡಿಕೊಂಡ ವಿದೇಶಿಯರೇ ಪೂಜಾರಿಗಳಾಗುತ್ತಿದ್ದರು. ರೋಮ ಸಾಮ್ರಾಜನಾದ ಕ್ಲಾಡಿಯಸನ ಕಾಲದವರೆಗೆ (ಕ್ರಿ.ಪೂ. 41– 54) ಸ್ಥಳೀಯರಿಗೆ ಇದರಲ್ಲಿ ಅವಕಾಶವಿರಲಿಲ್ಲ. ವೃಷಣ ಮರ್ದನ ಮಾಡಿಕೊಂಡವರೇ ಪೂಜಾರಿಗಳಾಗುವುದಕ್ಕಿದ್ದ ಕಾರಣವೆಂದರೆ –

ಸಿಬೆಲಿಯ ಮಗ ಅತ್ತೀಸ(Attis) ಒಂದು ಸಲ ತನ್ನ ತಾಯಿಯ ಕೋಪಗೊಳ್ಳಲು ಆತ ದುಃಖಿತನಾಗಿ ಸ್ವಯಂ ವೃಷಣ ಮರ್ದನ ಮಾಡಿಕೊಂಡು ಸತ್ತ. ಆಮೇಲೆ ತಾಯಿ ಶೋಕ ತಪ್ತಳಾಗಲು ಮತ್ತೆ ಜೀವ ಪಡೆದ.[17]

2.3.2 ರಾಷ್ಟ್ರೀಯ:

ಜಹಾಂಗೀರನ ಆಸ್ಥಾನಕ್ಕೆ (ಕಾಶ್ಮೀರ) ಭೇಟಿಕೊಟ್ಟ ಫ್ರಾನ್ಸಿಸ್ಕೊ ಪೆಲ್ಸಾರ್ಟ್‌ನ ಪ್ರಕಾರ –

'' ಹೆಂಡತಿಯರ ಮೇಲ್ವಿಚಾರಣೆ, ಮಹಲುಗಳ ರಕ್ಷಣೆ – ಈ ಕೆಲಸಗಳನ್ನೆಲ್ಲಾ ನೋಡಿಕೊಳ್ಳಲು ಮೂರು ನಾಲ್ಕು ಜನ ಖೋಜಾ(ಶಿಖಂಡಿ)ಗಳು ಇರುತ್ತಾರೆ. ಹೆಂಡತಿಯರು ನಡೆಸುವ ರಹಸ್ಯ ವ್ಯವಹಾರಗಳೆಲ್ಲ ಈ ಖೋಜಾಗಳಿಗೆ ಗೊತ್ತು. ಆದ್ದರಿಂದ ಅತ 'ಏನು ಕೇಳಿದರೂ ಅದನ್ನು ಕೊಟ್ಟು ಅವರನ್ನು ತಮ್ಮ ವಶಮಾಡಿಕೊಳ್ಳುತ್ತಾರೆ .....''

ಪ್ರವಾಸಿ ಕಂಡ ಇಂಡಿಯಾ ಸಂಪುಟಗಳಲ್ಲಿ[18] ಅಲ್ಲಲ್ಲಿ ಖೋಜಾಗಳ ಬಗೆಗೆ ವಿವರಗಳಿವೆ. ರಾಜನಿಗೆ ಭಕ್ಷ್ಯ ಭೋಜನಗಳನ್ನು ಬಡಿಸುವವರು ಅವರೇ ಆಗಿದ್ದರು. ಅಂತಃಪುರ ಮಾತ್ರವಲ್ಲದೆ ಅವರ ಮನೆಯ ಕಾವಲುಗಾರರೂ ಅವರೇ ಆಗಿದ್ದರು. ಷಹಜಹಾನನ ಆಸ್ಥಾನಕ್ಕೆ ಬಂದ ಪ್ರವಾಸಿಯೊಬ್ಬ(ನಿಕೊಲಿಯಾ ಮನುಚಿ)ನ ದಾಖಲೆಯಂತೆ ಮುಮತಾಜಳ ಶವವನ್ನು ಯಾರೂ ಮುಟ್ಟುವಂತಿಲ್ಲ. ಅಲ್ಲಿ ಕೇವಲ ಹೆಂಗಸರು ಮತ್ತು ಖೋಜಾಗಳಷ್ಟೇ ಇದ್ದರು.

ಮುಸ್ಲಿಂ ದೊರೆಗಳ ಆಸ್ಥಾನದಲ್ಲಂತೂ ಇವರಿಗೆ ಅಪಾರವಾದ ಅವಕಾಶ. ಅಲ್ಲಾವುದ್ದೀನ ಖಿಲ್ಜಿಯ ಅತ್ಯಂತ ವಿಶ್ವಾಸದ ಮಂತ್ರಿ ಮಲ್ಲಿಕಾಫರ ಖೋಜಾನೇ ಆಗಿದ್ದನಂತೆ. ಅಕ್ಬರನ ಆಸ್ಥಾನಿಕ ಸೈಯ್ಯದ ಖಾನನ ಹಿಂಬಾಲಕರಲ್ಲಿ 1200ಕ್ಕೂ ಹೆಚ್ಚು ಜನ ಇವರೇ ತುಂಬಿದ್ದರು. ಶಿಖಂಡಿ ಕ್ವಾಜಾಸರನ ಹಿಲಾಲ ಹಿಲಾಲಾಬಾದ ಎಂಬ ನಗರವನ್ನು ನಿರ್ಮಿಸಿದ. ಅರಸನು ನರ್ತಕಿಯರು ಹಾಗೂ ಉಪಪತ್ನಿಯರಂತೆ ಖೋಜಾಗಳಿಗೂ ಹೊಸ ಹೆಸರಿಟ್ಟು ಕರೆಯುತ್ತಿದ್ದ. ಇದನ್ನು ಗೌರವವೆಂದು ಅವರು ಭಾವಿಸುತ್ತಿದ್ದರು.[19]

2.3.3 ಸ್ಥಳೀಯ:

ಇಂದು ಹೊಸಪೇಟೆ ತಾಲೂಕೆಂದು ಕರೆಯಲಾಗುವ ಅಂದಿನ ವಿಜಯನಗರ ಸಾಮ್ರಾಜ್ಯದಲ್ಲಿ ನಪುಂಸಕರ ಪಾತ್ರ ಅಸಾಧಾರಣವಾದುದು. ರಾಜಾಲಯದಲ್ಲಿ ಪಾತ್ರದ ಸ್ವರೂಪವೇನೆಂಬುದನ್ನು ಡೊಮಿಂಗೊ ಪಾಯನ ಈ ವಿವರಣೆ ಸ್ಪಷ್ಟಪಡಿಸುತ್ತದೆ –

" ರಾಜ ಅರಮನೆಯೊಳಗೆ ತಾನೊಬ್ಬನೇ ಇರುತ್ತಾನೆ. ಮತ್ತು ತನ್ನ ಪತ್ನಿಯರಲ್ಲೊಬ್ಬಳ ಸಹವಾಸ ಬೇಕೆನಿಸಿದಾಗ ಒಬ್ಬ ನಪುಂಸಕನಿಗೆ ಅವಳನ್ನು ಕರೆತರುವಂತೆ ಆಜ್ಞಾಪಿಸುತ್ತಾನೆ. ಅವಳಿದ್ದಲ್ಲಿ ನಪುಂಸಕ ಪ್ರವೇಶಿಸಿ ಕಾವಲುಗಾರ್ತಿಯರಿಗೆ ಅದನ್ನು ಹೇಳುತ್ತಾನೆ .... ಈ ನಪುಂಸಕರಲ್ಲಿ ರಾಜನಿಗೆ ಅತ್ಯಂತ ಪ್ರೀತಿಯವರಾಗಿರುವವರು ಮತ್ತು ಅವನು ಮಲಗಿದಲ್ಲಿ ಮಲಗುವ ಕೆಲವರಿದ್ದಾರೆ; ಅವರು ದೊಡ್ಡ ಸಂಬಳ ಪಡೆಯುತ್ತಾರೆ."[20]

ಸಿವೆಲನ ಕೃತಿಯು ಇವರ ಕುರಿತು ಅನೇಕ ವಿವರಗಳನ್ನು ನೀಡುತ್ತದೆ. ಆ ಕಾಲದಲ್ಲಿ ನಪುಂಸಕರ ಸಂಬಂಧಗಳು ರಾಜ-ರಾಣಿಯರಿಗೆ ನೇರವಾಗಿ ಸಂಬಂಧಿಸಿದ್ದುಗಳಾಗಿದ್ದವು.

ರಾಣಿಯರೊಂದಿಗಿನ ಸಂಬಂಧ:

ರಾಣಿಯರಿಗೆ ಕಾವಲುಗಾರರಾಗಿ ಸ್ತ್ರೀ ಕಾವಲುಗಾರರಿರುತ್ತಿದ್ದರು. ಆದರೆ ನಪುಂಸಕರು ಸ್ತ್ರೀಯರಿಗೂ ಮತ್ತವರ ಕಾವಲುಗಾರರಿಗೂ ಕಾವಲುಗಾರರಾಗಿದ್ದರು. ಸ್ತ್ರೀಯರ ಅಂತಃಪುರಕ್ಕೆ ನಪುಂಸಕರ ಹೊರತಾಗಿ ಬೇರೆ ಯಾರಿಗೂ ಪ್ರವೇಶವಿರುತ್ತಿರಲಿಲ್ಲ, ಹಾಗೆಯೇ ಸ್ತ್ರೀಯರು ಹೊರಗಡೆಗೆ ಹೊರಹೋಗಲೂ ಇವರ ಹೊರತು ಅನ್ಯರಿಗೆ ಅವಕಾಶವಿರುತ್ತಿರಲಿಲ್ಲ.

ಈಗಾಗಲೇ ಪಾಯಸ್ ಹೇಳಿರುವಂತೆ ರಾಜನಿಂದ ರಾಣಿಗೆ ಸುದ್ದಿ ಮುಟ್ಟಿಸುವ ಹೊಣೆಗಾರಿಕೆಯೂ ಇವರದೇ ಆಗಿತ್ತು.

ರಾಜನೊಂದಿಗಿನ ಸಂಬಂಧ:

ಇವರು ರಾಜನೊಂದಿಗೂ ನಿತ್ಯ ಸಂಪರ್ಕವಿಟ್ಟು ಕೊಂಡವರಾಗಿರುತ್ತಾರೆ. ಅರಮನೆಯ ದ್ವಾರದಲ್ಲಿ ಹೆಂಗಸರು ಮತ್ತು ಇವರದೇ ಪರಿಚಾರಿಕೆ. ಈಗಾಗಲೇ ಹೇಳಿರುವಂತೆ ಇವರು ರಾಜ ಬಯಸಿದಾಗ ಅಂತಃಪುರದಿಂದ ಸ್ತ್ರೀಯರನ್ನು ಕರೆಯುತ್ತಾರೆ. ಹೀಗೆ ಒಂದು ರೀತಿಯಲ್ಲಿ ರಾಜ ರಾಣಿಯರಿಗೆ ಸಂಪರ್ಕ ಮಾಧ್ಯಮಗಳಾಗಿದ್ದರು.

ಇದಲ್ಲದೆ ರಾಜನೊಂದಿಗೆ ಮಹತ್ತ್ವವಾದ ಉತ್ಸವಗಳಲ್ಲಿ ಜತೆಗೂಡುವುದು, ಆಹಾರ ಬಡಿಸುವುದು ಇತ್ಯಾದಿ ಸೇವೆಗಳನ್ನು ಮಾಡುವವರಾಗಿದ್ದರು. ಹೀಗೆ ವಿಜಯನಗರ ಕಾಲದಲ್ಲಿ ನಪುಂಸಕರ ಪಾತ್ರ ಪರಿಗಣಾತ್ಮಕವಾಗಿತ್ತು. ಆಗಿನ ಕಾಲದಲ್ಲಿ ಅವರ ಸಂಖ್ಯೆ ಸುಮಾರು ಐನೂರರಿಂದ ಆರುನೂರು.

ಅಧ್ಯಾಯ — 3

ಪೌರಾಣಿಕ ಮತ್ತು ಶಾಸ್ತ್ರೀಯ ಗ್ರಹಿಕೆಗಳು.

3.1 ಮಹಾಭಾರತದ ಶಿಖಂಡಿ ಮತ್ತು ಭೀಷ್ಮರು.

ವೇದಕಾಲದಿಂದಲೂ ನಮ್ಮವರಿಗೆ ಖೋಜಗಳು ಅಪರಿಚಿತರಲ್ಲ. 'ಪುರುಷ ಮೇಧ' ದಂತಹ ಸಂದರ್ಭಗಳಲ್ಲಿ ಇವರನ್ನು ವಧಿಸಲಾಗುತ್ತಿತ್ತು. ಅಥರ್ವಣವೇದ, ಶತಪಥ ಬ್ರಾಹ್ಮಣ, ವಾಜಸನೇಯ ಸಂಹಿತೆಗಳಲ್ಲಿ ಇವರ ಬಗೆಗೆ ನಿರ್ದಾಕ್ಷಿಣ್ಯವೇ ವ್ಯಕ್ತವಾಗಿದೆ.

ಬೈಬಲ ಮತ್ತು ಖುರಾನಗಳಲ್ಲಿಯೂ ನಪುಂಸಕರ ಬಗೆಗೆ ಸಹನುಷವಿಲ್ಲ. ಬೈಬಲನ ಯಾಜಕಕಾಂಡ 21 ರಲ್ಲಿ 'ಬೀಜದೋಷವಿರುವ ಪುರುಷ' ಯೆಹೋವನಿಗೆ ಹೋಮ ದ್ರವ್ಯಗಳನ್ನು ಅರ್ಪಿಸಬಾರದು ಎಂದಿದೆ.

'ಮನುಸ್ಮೃತಿ'ಯಲ್ಲಂತೂ ಬಹಿಷ್ಕಾರಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳಿಗೂ ಇವರನ್ನು ನಿರ್ದೇಶಿಸಲಾಗುತ್ತದೆ. ನಪುಂಸಕರ ಎಂಜಲನ್ನು ಬ್ರಾಹ್ಮಣರು ತಿನ್ನಬಾರದು, ಷಂಡನು ಬ್ರಾಹ್ಮಣನು ಉಣ್ಣುವಾಗ ನೋಡಬಾರದು; ನಪುಂಸಕರು ಹವ್ಯ — ಕವ್ಯಗಳಲ್ಲಿ ವರ್ಜ್ಯರು — ಇವು ಮನು ವಿಧಿಸುವ ಕೆಲವೊಂದು ಕಟ್ಟಳೆಗಳು. ಮನುಧರ್ಮಶಾಸ್ತ್ರದ ನಪುಂಸಕರಿಗೆ ದೊರೆತಿರುವ ಒಂದೇ ಒಂದು ವರದಾನವೆಂದರೆ ನಿಯೋಗದ ಮೂಲಕ ಇಂತಹವರ ಹೆಂಡತಿಯರಿಗೆ ಹುಟ್ಟಿದ ಮಗನು ಕ್ಷೇತ್ರಜನು ಎಂಬುದೇ!

ಅರ್ಥಶಾಸ್ತ್ರಜ್ಞ (ರಾಜ್ಯಶಾಸ್ತ್ರ ಎಂಬರ್ಥದಲ್ಲಿ) ಕೌಟಿಲ್ಯನು ಶಿಖಂಡಿಗಳ ಬಗೆಗೆ ಸ್ವಲ್ಪ ಮಟ್ಟಿಗೆ ಉದಾರಿಯಾಗಿದ್ದಾನೆ. ಶಿಖಂಡಿಗಳು ಅರಮನೆಯ ಉತ್ತಮ ಸೇವಕರೆಂಬುದು ಅವನ ಅಭಿಪ್ರಾಯ. ನೈತಿಕ ಪರಿಶೀಲನೆ, ಗೂಢಚಾರಿಕೆ ಮೊದಲಾದವುಗಳಲ್ಲಿ ಶಿಖಂಡಿಗಳು ಪಾಲ್ಗೊಂಡಿರುವುದರ ಉಲ್ಲೇಖ ಕೌಟಿಲ್ಯನಲ್ಲಿದೆ. ವಾತ್ಸ್ಯಾಯನನ ಕಾಮ ಶಾಸ್ತ್ರದಲ್ಲಿ ಇವರನ್ನು ತೃತೀಯ ಪ್ರಕೃತಿಯವರು ಎನ್ನಲಾಗಿದೆ. ಈ ಪ್ರಕೃತಿಯವರು ಸ್ತ್ರೀ ರೂಪಿಣೀ ಮತ್ತು ಪುರುಷ ರೂಪಿಣೀ ಎಂದು ಎರಡು ವಿಧದವರಾಗಿರುತ್ತಾರೆ. ಸ್ತ್ರೀರೂಪಿಣಿಯ ಲಕ್ಷಣಗಳಿವು —

ವೇಷ, ಮಾತು, ಧೀರುತ್ವ, ಮೃದುತ್ವಗಳು ಸ್ತ್ರೀಯಂತೆಯೇ ಇರುತ್ತವೆ.

ಪುರುಷ ರೂಪಿಣೀಯಾದ ಷಂಡನು ಕಾಮ ವಾಸನೆಯನ್ನು ವ್ಯಕ್ತ ಮಾಡದೆ, ಪುರುಷ ಸಮಾಗಮದ ಇಚ್ಛೆಯಿಂದ ಲಿಂಗ ಮರ್ಧನ ಕೈಗೊಂಡು ಉದರ ಪೋಷಣೆ ಕೈಗೊಳ್ಳುತ್ತಾನೆ.

ಇವರೀರ್ವರ ಮೂಲಕ ನಡೆಯುವ ಸಂಭೋಗವನ್ನು ವಾತ್ಸ್ಯಾಯನ 'ಔಪರಿಷ್ಟಕ' ವೆನ್ನುತ್ತಾನೆ. ಇದನ್ನು ದೇಶ, ಕಾಲ, ಪ್ರಯೋಗ, ಶಾಸ್ತ್ರಾಧಾರಿತವಾಗಿ ಗಮನಿಸ ಬೇಕೆಂಬುದೇ ವಾತ್ಸ್ಯಾಯನನ ಅಭಿಮತ.

ಬೌದ್ಧ ಧರ್ಮೀಯರ ಪ್ರಕಾರ ಇವರಿಗೆ ಆಸ್ತಿಯ ಹಕ್ಕು ಇಲ್ಲ. ಧರ್ಮಾಂತರಕ್ಕೂ ಇವರು ಅನರ್ಹರು. ಹಾಗೆಯೆ ಬೌದ್ಧ ಸನ್ಯಾಸಿಯರ ಪ್ರಸಂಗ ನಿವಾರಿಸುವುದಕ್ಕೂ ಇವರಿಗೆ ಸಾಧ್ಯವಿಲ್ಲ.[1]

ಜೈನ ವಾಙ್ಮಯದಲ್ಲಿಯೂ ಇಂತಹ ನಿಷೇಧಗಳೇ ಇವೆ. ಸಮ್ಯಗ ಚಾರಿತ್ರ್ಯವುಳ್ಳ ವ್ಯಕ್ತಿಗೆ ನಪುಂಸಕತೆಯ ಭಯವಿಲ್ಲವೆಂಬುದು ಶಾಸ್ತ್ರಗಳ ಅಭಿಮತ.

'ನಪುಂಸಕ ವೇದ' ಎಂಬುದು ಜೈನ ಪರಿಭಾಷೆಯಲ್ಲಿ ಒಂದು ಮನೋಕಷಾಯ. ಚಾರಿತ್ರಿಕ ಮೋಹನೀಯದ ಭೇದಗಳಾದ ಮೂರು ಬಗೆಯ ವೇದಗಳಲ್ಲಿ ಒಂದು. ಆತ್ಮನಿಗೆ ಚೈತನ್ಯರೂಪ ಪರ್ಯಾಯದಲ್ಲಿ ಮೈಥುನರೂಪವಾದ ಚಿತ್ತವಿಕ್ಷೇಪವುಂಟಾಗುತ್ತದೆ. ಇದಕ್ಕೆ ವೇದವೆಂದು ಹೆಸರು. ಇದರಲ್ಲಿ ಪುರುಷವೇದ, ಸ್ತ್ರೀವೇದ, ನಪುಂಸಕ ವೇದವೆಂದು ಮೂರು ಬಗೆಗಳಿವೆ. ಸ್ತ್ರೀವೇದದ ಉದಯದಿಂದ ಪುರುಷ ವಿಷಯಕ ಕಾಮವುಂಟಾಗುತ್ತದೆ. ಪುರುಷ ವೇದದ ಉದಯದಿಂದ ಸ್ತ್ರೀ ವಿಷಯಕವಾದ ಕಾಮವುಂಟಾಗುತ್ತದೆ. ನಪುಂಸಕವೇದದ ಉದಯದಿಂದ ಸ್ತ್ರೀಪುರುಷೋಭಯಾತ್ಮಕವಾದ ಕಾಮವುಂಟಾಗುತ್ತದೆ. ನಪುಂಸಕ ವೇದದಿಂದುಂಟಾಗುವ ಭಾವವು ಆವಿಗೆಯಲ್ಲಿರುವ ಬೆಂಕಿಯಂತೆ ದೀರ್ಘ ಕಾಲವಿರುತ್ತದೆ. ಆ ಕಾರಣದಿಂದ ವ್ಯಕ್ತಿಯು ಪುರುಷ ಶಕ್ತಿ, ಸ್ತ್ರೀಶಕ್ತಿ ಎರಡೂ ಇಲ್ಲದವನಾಗುತ್ತಾನೆ. ಅವ್ರತ ಸಮ್ಯಗ್ದೃಷ್ಟಿ ಜೀವಿಗೆ ಇವು ಉಂಟಾಗುವುದಿಲ್ಲವೆಂದು ಸಮಂತ ಭದ್ರರ ಅಭಿಪ್ರಾಯ.[2]

ವ್ಯಾಕರಣ ಶಾಸ್ತ್ರದಲ್ಲಿ 'ನಪುಂಸಕಲಿಂಗ' ಪ್ರಸಿದ್ಧವೇ ಇದೆ. ಸ್ತ್ರೀಯೂ ಅಲ್ಲದ ಪುರುಷನೂ ಅಲ್ಲದ ಲಿಂಗವದು. ಆಶ್ಚರ್ಯವೆಂದರೆ ಅನೇಕ ಭಾಷೆಗಳಲ್ಲಿ

ಸ್ತ್ರೀಲಿಂಗಕ್ಕೆ ಪ್ರತ್ಯೇಕವಾದ ಪ್ರತ್ಯಯವು ಇಲ್ಲದೆ ನಪುಂಸಕಲಿಂಗವೇ ಆಗಿರುತ್ತದೆ.

ಒಟ್ಟು ಭಾರತೀಯ(ವೈದಿಕ) ವಾಙ್ಮಯವನ್ನು ಗಮನಿಸಿದರೆ ನಪುಂಸಕತೆಯನ್ನು ಹೀನಾಯಕವಾದ ಶಿಕ್ಷೆಯೆಂದು ಪರಿಭಾವಿಸಲಾಗಿದೆ. ಚಂಡಾಲನೊಬ್ಬ ಬ್ರಾಹ್ಮಣ ಎದುರಾಗಿ ಮೂತ್ರಿಸಿದರೆ, ಬ್ರಾಹ್ಮಣ ಕನ್ಯೆಯೊಂದಿಗೆ ಸಂಭೋಗ ಮಾಡಿದರೆ ಅವನಿಗೆ 'ವೃಷಣ ವರ್ಧನ' ಮಾಡಬೇಕೆಂದು ಶಾಸ್ತ್ರಗಳ ಅಭಿಪ್ರಾಯ. ಅಸ್ಪೃಶ್ಯತೆಗಿಂತಲೂ ಕೀಳಾದ ಶಿಕ್ಷೆಯಾಗಿ ವೃಷಣ ವರ್ಧನವನ್ನು ಪರಿಗಣಿಸಲಾಗಿದೆ. ಆದರೆ ಮಹಾಭಾರತ ಕಾಲಕ್ಕಾಗುವಾಗ ಇವರ ಸ್ಥಿತಿಗತಿಯಲ್ಲಿ ಬದಲಾವಣೆಯಾಗಿ ಅದೊಂದು ಶಾಪವೆಂದು ಪರಿಗಣಿಸಲಾಯಿತು.

೩.1 ಮಹಾಭಾರತದ ಶಿಖಂಡಿ ಮತ್ತು ಭೀಷ್ಮರು:

ಇಲ್ಲೀಗ ಮಹಾಭಾರತದ ಶಿಖಂಡಿಯನ್ನು ಚರ್ಚೆಗೆ ಎತ್ತಿ ಕೊಳ್ಳಬಹುದು. ಪೂರ್ವ ಜನ್ಮದಲ್ಲಿ ಈ ಶಿಖಂಡಿ ಕಾಶೀರಾಜನ ಮಗಳಾದ ಅಂಬೆ. ತಾರುಣ್ಯದಲ್ಲಿ ಭೀಷ್ಮನನ್ನು ಪ್ರೇಮಿಸಿದ ಈಕೆ ಆ ನಿಟ್ಟಿನಲ್ಲಿ ಪೂರ್ಣವಾಗಿ ನೋವನ್ನು ಅನುಭವಿಸಿದಾಗ ಆತ್ಮಹತ್ಯೆ ಮಾಡಿ ದ್ರುಪದನಿಗೆ ಮಗಳಾಗಿ ಹುಟ್ಟಿದಳು. ಆಮೇಲೆ ಬೆಳೆಯುತ್ತ ಗಂಡಾಗಿ ಶಿಖಂಡಿಯಾದಳು.

ಮಹಾಭಾರತದಲ್ಲಿ ಶಿಖಂಡಿ ಮತ್ತು ಭೀಷ್ಮರ ಮುಖಾಮುಖಿ ಕುತೂಹಲಕರವಾದುದು. ಅದು ನಮ್ಮ ಪಾರಂಪರಿಕ ಚಿಂತನೆಯ ಅನೇಕ ಮಗ್ಗುಲನ್ನು ಪದರ ಪದರವಾಗಿ ಬಿಡಿಸುವ ಪರಿಕಲ್ಪನೆ. ಮಹಾಭಾರತದ ಶಿಖಂಡಿಯನ್ನು ನಾನೊಂದು 'ಪರಿಕಲ್ಪನೆ' ಎಂದೇ ಭಾವಿಸುತ್ತೇನೆ.

ಅಜೇಯನಾದ ಭೀಷ್ಮ, ಭೀಷಣವಾದ ಪ್ರತಿಜ್ಞೆ ಮಾಡಿದ ದೇವವ್ರತ, ಶಿಖಂಡಿ ಎದುರಾದಾಗ ಶಸ್ತ್ರ ಸಂನ್ಯಾಸ ಮಾಡುತ್ತಾನೆ. ಮಹಾಭಾರತದಲ್ಲಿ ಇದಕ್ಕೆ ಇಷ್ಟರ ವರೆಗೆ ವೀರಾಧಿ ವೀರರನ್ನು ಎದುರಿಸುತ್ತಿದ್ದ ಭೀಷ್ಮ, ಹೆಣ್ಣೊಬ್ಬಳು ತನ್ನನ್ನು ಎದುರಿಸುವ ಧೈರ್ಯ ಮಾಡಿದಳು ಎನ್ನುವ ಕಾರಣದಿಂದ ಶಸ್ತ್ರ ಸಂನ್ಯಾಸ ಮಾಡುತ್ತಾನೆ ಎನ್ನಲಾಗಿದೆ. ಪುರುಷರ್ಷಭನಾದ ಭೀಷ್ಮನ ಪ್ರತಿಷ್ಠೆಗೆ ಅವಹೇಳನ ಎನ್ನುವ ಕಾರಣವನ್ನೇ ಪ್ರಧಾನವಾಗಿ ಮಹಾಭಾರತ ಹೇಳುತ್ತದೆ.

ಶಿಖಂಡಿಯೊಂದಿಗೆ ಭೀಷ್ಮನ ಮುಖಾಮುಖಿಯನ್ನು ನಾನು ಪ್ರೊ: ಕೆ. ಎಸ್. ನಾರಾಯಣಾಚಾರ್ಯರ ಮಹಾಭಾರತದ ಪಾತ್ರ ಪ್ರಪಂಚಗಳ ಹಿನ್ನೆಲೆಯಲ್ಲಿ ಗ್ರಹಿಸುತ್ತೇನೆ. ವ್ಯಾಸ ಪ್ರಣೀತ ಭೀಷ್ಮನ ಅಧಿಕೃತ ವ್ಯಕ್ತಿತ್ವದ ನಿರೂಪಣೆಯಿದು ಎಂದು ಭಾವಿಸಿ ಮುಂದಿನ ನನ್ನ ವಾದವನ್ನು ಮಂಡಿಸುತ್ತಿದ್ದೇನೆ.[3]

ಭೀಷ್ಮನ ಜನನವು ಒಂದು ಪಾಪ ಪರಿಹಾರದ ಫಲವಾಗಿಯೇ ನಡೆಯುತ್ತದೆ. ಅದರ ಪ್ರಕಾರ ಆತ ಸ್ತ್ರೀ ಭೋಗ ರಹಿತನಾಗಿ, ಧರ್ಮಾತ್ಮನಾಗಿ, ಶಾಸ್ತ್ರವಿದನಾಗಿ ಭೂಲೋಕದಲ್ಲಿ ಜನ್ಮ ತಳೆದ. ಈ ಶಾಪವನ್ನು ಸೂಕ್ಷ್ಮವಾಗಿ ಗಮನಿಸಿದರೆ ಒಂದೇ ಒಂದು ಅವಗುಣವೂ ಇರುವುದಿಲ್ಲ. ಮನುಷ್ಯನಾಗಿ ಹುಟ್ಟುವುದಷ್ಟೇ ಅವನಿಗೆ ಪಾಪ ಪರಿಹಾರ. ಅಂದರೆ ಭಾರತೀಯ(ಮಹಾಭಾರತದ) ಚಿಂತನೆಗಳ ಪ್ರಕಾರ ಸ್ತ್ರೀ ಭೋಗವೂ ಪಾಪವೆಂದೇ ಪರಿಗಣಿಸಲಾಗಿದೆ.

ವೈರುಧ್ಯವಿರುವುದು ಇಲ್ಲಿಯೇ. ಒಂದೆಡೆ ಅಧ್ಯಾತ್ಮದ ತುತ್ತ ತುದಿಯಲ್ಲಿ ನಿಂತು ಸ್ತ್ರೀ ಭೋಗವನ್ನು ನಿರಾಕರಿಸುವ ಈ ಚಿಂತನೆಗಳು ಲೌಕಿಕ ನೆಲೆಗೆ ಬಂದಾಗ ಪುರುಷತ್ವದ ಸಾಕಾರ ರೂಪವಾಗಿ, ಸ್ತ್ರೀಭೋಗವನ್ನೂ ಹೇಳುತ್ತವೆ. ಹಾಗಾದುದರಿಂದಲೇ ಕಾಮಶಾಸ್ತ್ರದ ಗ್ರಂಥಗಳ ಅವತರಣವಾಗುತ್ತದೆ. ಭೀಷ್ಮ ಭಾರತೀಯ ಚಿಂತನೆಯ ಈ ವೈರುಧ್ಯಗಳ ಪ್ರತೀಕವಾಗಿದ್ದಾನೆ. ಆತನಲ್ಲಿ ಅಧ್ಯಾತ್ಮದ ಪರಾಕಾಷ್ಠೆಯೂ ಇದೆ. 'ಶಿಖಂಡಿ' ಎನ್ನುವ ಪದಕ್ಕಿರುವ ಆಧ್ಯಾತ್ಮಿಕ ಅರ್ಥವನ್ನು ಇಲ್ಲಿ ಪರಿಭಾವಿಸಿಕೊಳ್ಳುವುದು ಸೂಕ್ತ. ಹಾಗೆಯೇ ಲೌಕಿಕ ನೆಲೆಯಲ್ಲಿಯೂ ಒಂದರ್ಥದಲ್ಲಿ ಪುರುಷ ಸಿಂಹನೇ ಆಗಿದ್ದಾನೆ. ಆದರೆ ಆಧ್ಯಾತ್ಮಿಕವಾಗಿಯೇನೋ ಮೇಲ್ಗೈ ಪಡೆದ. ಲೌಕಿಕ ನೆಲೆಯಲ್ಲಿ ಕೈಲಾಗಲಿಲ್ಲ: ಅವನೇ ಹೇಳುವಂತೆ 'ಕ್ಲೀಬವತ್ ಬ್ರವೀಮಿ' — ನನಗೆ ನಪುಂಸಕತನವಿದೆ. ಅಂದರೆ ಲೌಕಿಕವಾಗಿ ಆತನೂ ಷಂಡನೇ. ವ್ಯತ್ಯಾಸವಿಷ್ಟೇ — ಶಿಖಂಡಿ ದೈಹಿಕವಾಗಿ ನಪುಂಸಕ. ಭೀಷ್ಮ ಮಾನಸಿಕ ನೆಲೆಯಲ್ಲಿ ನಪುಂಸಕ. ನಪುಂಸಕ ನಪುಂಸಕನಿಗೆ ಶರಣಾದ. ಭಾರತೀಯ ಚಿಂತನೆಯು ಲೌಕಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳ ಘರ್ಷಣೆಯಿದು.

ಅಧ್ಯಾಯವು — 4

ವೈಜ್ಞಾನಿಕ ಶೋಧಗಳು

4.1 ಕ್ಲೈನೆ ಪೆಲ್ಟರನ ಲಕ್ಷಣಗಳು

4.2 ವರ್ಣರಾಹಿತ್ಯ ಕ್ಲೈನೆ ಫೆಲ್ಟರನ ಲಕ್ಷಣಗಳು.

4.3 ಟರ್ನರನ ಲಕ್ಷಣಗಳು.

4.4 ರಿಫೆನಸ್ಸಿನ ಲಕ್ಷಣಗಳು.

ಅಧ್ಯಾತ್ಮವು ಮಾನಸಿಕ ಅದ್ವೈತವನ್ನು ಎತ್ತಿ ಹೇಳುತ್ತದೆ ಎಂದು ಈಗಾಗಲೇ ಹೇಳಲಾಯಿತು. ದೈಹಿಕ ಅದ್ವೈತವನ್ನು ಅಧಾರ್ಮಿಕ ನೆರೆಯಲ್ಲಿ ನಿರ್ವಹಿಸ ಬೇಕೆಂಬುದನ್ನು ಅಲ್ಲಿ ಹೇಳಲಾಯಿತು. ಅಧ್ಯಾತ್ಮ ನಿರಾಕರಿಸುವ ದೈಹಿಕ ಅದ್ವೈತವನ್ನು ವಿಜ್ಞಾನ ವಿವರಿಸುವ ಪರಿಯನ್ನು ಸ್ಥೂಲವಾಗಿ ಇಲ್ಲಿ ಅರ್ಥೈಸಿಕೊಳ್ಳಲಾಗಿದೆ.[1]

4.1 ಕ್ಲೈನ ಫೆಲ್ಟರನ ಲಕ್ಷಣಗಳು (Klincfelter's Syndrome):

ಇದು ಮುಖ್ಯವಾಗಿ ವೃಷಣದ ಅನಿಯಮಿತ ನ್ಯೂನತೆಯಿಂದುಂಟಾಗುತ್ತದೆ.

ಈ ಮೂಲಕ ನಿರ್ವೀರ್ಯತೆಗೆ ಮತ್ತು ಅಂಡರೇತ್ರ ಗ್ರಂಥಿಯ ನ್ಯೂನತೆಗೆ ಕಾರಣವಾಗುತ್ತದೆ. ಇವರ ಸಾಮಾನ್ಯ ಲಕ್ಷಣಗಳೆಂದರೆ —

1) ನಪುಂಸಕತ್ವ (eunuchoidism)
2) ಸ್ತ್ರೀತ್ವ (gynecomastia)
3) ಮೂತ್ರದ ಮೂಲಕ ಅಧಿಕ ರೇತಸ್ಸಿನ ವಿಸರ್ಜನೆ (high urinary gonadotrophia)
4) ಸಣ್ಣ ವೃಷಣಗಳು ಮತ್ತು ಸ್ಪರ್ಶ ಟ್ಯೂಬಿನ ನ್ಯೂನತೆಗಳು (Small firm tests with tuber hyalinisation)
5) ವೃಷಣ ಕೋಶದ ನ್ಯೂನತೆಗಳು.

ಕ್ಲೈನ ಫೆಲ್ಟರ ಲಕ್ಷಣಗಳು ಮಾನಸಿಕವಾಗಿ ಅಸ್ವಸ್ಥರಾದ ಮಕ್ಕಳಲ್ಲಿ ಸಹಜವಾಗಿರುತ್ತದೆ. ಈ ಲಕ್ಷಣವುಳ್ಳ ಗಂಡು ಮಕ್ಕಳು ಸಹಜವಾಗಿಯೇ ಇರುತ್ತಾರಾದರೂ ಪ್ರಬುದ್ಧತೆಗೆ ಬರುವುದು ತಡೆಗೊಳ್ಳುತ್ತದೆ ಇಲ್ಲವೇ ಅಸಮರ್ಪಕವಾಗುತ್ತದೆ. ಪ್ರೋಟೋ ಪ್ಲಾಸಮ್‌ನ ದುರ್ಬಲತೆಯಿಂದಾಗಿ ಇವರು ಅನೇಕ ರೀತಿಯ ವ್ಯಾಧಿಗೊಳಗಾಗುತ್ತಾರೆ. ಮಧ್ಯವಯಸ್ಸಿನ ಸ್ತ್ರೀಯರಿಗೆ

ಸಂಖ್ಯೆಯಾದರೆ ಸಾಮಾನ್ಯವಾಗಿ ಈ ಸಮಸ್ಯೆಯುಂಟಾಗುತ್ತದೆ. ಇಂತವರಲ್ಲಿ ಕ್ರೋಮೋಸೋಮಿನ ವಿತರಣೆ 47XXY ಆಗಿರುತ್ತದೆ. ಈ ಲಕ್ಷಣವನ್ನು ಬಾಹ್ಯ ಪರೀಕ್ಷೆಯಿಂದಲೇ ಗುರುತಿಸಬಹುದು. ಇದಲ್ಲದೆ ಇನ್ನೊಂದು ಬಗೆಯ ವಿತರಣೆಯೂ ಇರುತ್ತದೆ. ಆ ಪ್ರಕಾರ 48/XXY ಕ್ರೋಮೋಸೋಮಿನ ವಿತರಣೆಯಾಗುತ್ತದೆ. ಇದು ಪ್ರಾಯೋಗಿಕ ಪರೀಕ್ಷೆಗೆ ಮಾತ್ರವೇ ಕಂಡು ಬರುವ ಲಕ್ಷಣ.

4.2 ವರ್ಣರಾಹಿತ್ಯ ಕ್ಲೈನೋ ಫೆಲ್ಟರನ ಲಕ್ಷಣಗಳು:
(Chromatin Negative Klinefelter's Syndrome)

ಈ ಲಕ್ಷಣಗಳು ಅಪರೂಪವಾಗಿರುತ್ತವೆ. ಈಗಾಗಲೇ ವಿವರಿಸಿರುವ ಲಕ್ಷಣಗಳೊಂದಿಗೆ ಕ್ರೋಮೋಸೋಮಿಗಿರುವ ವರ್ಣರಾಹಿತ್ಯವೇ ವರ್ಣರಾಹಿತ್ಯ ಕ್ಲೈನೋ ಫೆಲ್ಟರನ ಲಕ್ಷಣಗಳು. ಈ ಕಾರಣದಿಂದಲೂ ಮೇಲೆ ವಿವರಿಸಿದ ಕ್ಲೈನ ಫೆಲ್ಟರನ ಲಕ್ಷಣಗಳು ಕಂಡು ಬರಬಹುದು.

4.3 ಟರ್ನರನ ಲಕ್ಷಣಗಳು:

ಈಗಾಗಲೇ ಹೇಳಿರುವಂತೆ ಹೆಂಗಸರಲ್ಲಿ XX ಕ್ರೋಮೋಸೋಮುಗಳಿರುತ್ತವೆ. ಆದರೆ ಟರ್ನರನ ವಿತರಣೆಯಲ್ಲಿ ಅದು XO ಆಗಿರುತ್ತದೆ. ಇದು ಹೆಂಗಸರಲ್ಲಿ ಕಂಡು ಬರುತ್ತದೆ. ಇಂತಹ ಹೆಂಗಸರು ನಿಷ್ಫಲತೆ, (Sterility) ರಜೋ ದರ್ಶನವಾಗದಿರುವುದು, ಅಗಲವಾದ ಕತ್ತು, ಸ್ತನ ದೌರ್ಬಲ್ಯ, ಶೈಶವಾವಸ್ಥೆಯಲ್ಲಿರುವ ಯೋನಿ (infantile) ಇವು ಇದರ ಲಕ್ಷಣಗಳು.

ಇದಕ್ಕೆ ಕಾರಣಗಳು ತಿಳಿದು ಬಂದಿಲ್ಲ. ಟರ್ನರನ ಲಕ್ಷಣಗಳಲ್ಲಿ ಕ್ರೋಮೋಸೋಮುಗಳ ಹಂಚಿಕೆಯು 46XX/45X 45X/47XXX ರೀತಿಯಲ್ಲಿರುತ್ತದೆ.

4.4 ರಿಫೆನಸ್ಟಿನ್ ಲಕ್ಷಣಗಳು:

ಇದು ಆನುವಂಶೀಯವಾಗಿ ಬರುವಂತಹುದು. ಇವರು ಪಾರ್ಶ್ವಿಕ ಉಭಯ ಲಿಂಗಿಗಳು.(Pseudoher Maphroditism)

ಇದರ ತೋರ್ಕೆಗಳಿವು –

1) ಮಗುವಿನ ಜನನ ಕಾಲದಲ್ಲೇ ಮಗುವಿಗೆ ಬಾಹ್ಯ ಲಿಂಗ ಗುರುತಿಸಲಾರದಷ್ಟು ಅಸ್ಪಷ್ಟವಾಗಿರುವುದು. ಕೆಲವೊಮ್ಮೆ ವೃಷಣ ಇರುವುದು ಅಥವಾ ಇಲ್ಲದೇ ಇರುವುದು.

2) ಮಗುವಿನಲ್ಲಿ ವೃಷಣಗಳು ವೃಷಣ ಚೀಲದಲ್ಲಿರದೆ ಮೇಲೆ ಅಥವಾ ಕೆಳಗೆ-ಮೇಲೆಯಾಗಿರುವುದು. ಇವರನ್ನು ಸ್ತ್ರೀಯರೆಂದೇ ತಿಳಿದು ಪೋಷಿಸಲಾಗುತ್ತದೆ.

3) ಮಹಿಳೆಯರಂತೆ ಬಾಹ್ಯ ಲೈಂಗಿಕಾವಯವಗಳನ್ನು ಹೊಂದಿರುವ ಮಕ್ಕಳು ಪ್ರಬುದ್ಧರಾಗುವ ಗಂಡಸರ ಗುಣಧರ್ಮಗಳನ್ನೇ ಅನುಸರಿಸುತ್ತಾರೆ.

4) ಈ ಲಕ್ಷಣಗಳಿರುವ ರೋಗಿಗಳ ವೃಷಣಗಳು ವೃಷಣ ಚೀಲದಲ್ಲಿರದೆ ಮೇಲ್ಗಡೆಯೇ ಇರುವುದರಿಂದ ಸ್ತ್ರೀಯ ಲೈಂಗಿಕಾವಯವದಂತೆ ತೋರುತ್ತದೆ.

ಇದಕ್ಕೆ ಕಾರಣಗಳು –

1. ಪಿಟ್ಯುಟರಿ ಗ್ರಂಥಿಯ ವೈಫಲ್ಯ.
2. ಕೇಂದ್ರ ನರಮಂಡಲಕ್ಕೆ ಜನನ ಕಾಲದಲ್ಲಾಗುವ ಧಕ್ಕೆ.
3. ವೃಷಣಗಳು ವೃಷಣ ಚೀಲದಲ್ಲಿಳಿಯದಿರುವುದು.

ಆದರೆ ಹೊಸಪೇಟೆ ತಾಲೂಕಿನ ಗಂಡು ಜೋಗಮ್ಮರಲ್ಲಿ ಮೇಲೆ ತಿಳಿಸಿದ ಯಾವ ಲಕ್ಷಣಗಳೂ ಕಂಡು ಬರುವುದಿಲ್ಲ. ಉದ್ರೇಕಗೊಳ್ಳದ ಶಿಶ್ನ, ಸ್ತ್ರೀಯ ಸ್ವಭಾವಗಳು ಇವರ ಮುಖ್ಯ ಲಕ್ಷಣಗಳು. ಈ ಕುರಿತು ನಿಖರವಾಗಿ 'ಏನನ್ನೂ ಹೇಳಲಿಕ್ಕಾಗದಿದ್ದರೂ ಈ ಅಧ್ಯಯನದ ಮಿತಿಯಲ್ಲಿ ಅದನ್ನು ಹಾರ್ಮೋನಿನ ಅಸಮರ್ಪಕ ವಿತರಣೆ ಎಂದು ಗುರುತಿಸಲಾಗಿದೆ. ಅಂದರೆ –

ಗಂಡಸರಲ್ಲಿ ಪ್ರೊಜೆಸ್ಟರಾನ ಎಂಬ ಹಾರ್ಮೋನೂ (Projesterone) ಹೆಂಗಸರಲ್ಲಿ ಈಸ್ಟ್ರೋಜೆನ (Oestrogen) ಎಂಬ ಹಾರ್ಮೋನೂ ಹೆಚ್ಚು ಪ್ರಮಾಣದಲ್ಲಿರಬೇಕು, ಇರುತ್ತದೆ. ಕಾರಣಾಂತರದಿಂದ ಇವುಗಳಲ್ಲಿ ಯಾವುದಾದರೊಂದು ವ್ಯತ್ಯಯವುಂಟಾದರೆ ಗಂಡಸರಿಗೆ ಹೆಂಗಸರ ಗುಣಗಳೂ ಹೆಂಗಸರಿಗೆ ಗಂಡಸರ ಗುಣಗಳೂ ಬರುತ್ತವೆ. ಇಲ್ಲೂ ಕುತೂಹಲವೆಂದರೆ ಇದು ಸ್ತ್ರೀ – ಪುರುಷರಿಬ್ಬರಿಗೂ ಬರಬಹುದಾದರೂ ಈ ಲಕ್ಷಣಗಳಿರುವ ಸ್ತ್ರೀಯರು ತಾಲೂಕಿನಲ್ಲಿ ಅಪರೂಪ. ಆದರೆ ಈ ನ್ಯೂನತೆಯಿಂದ ಬಳಲುತ್ತಿರುವುದು ಪುರುಷರೇ. ಹಾರ್ಮೋನಿನ ಅಸಮರ್ಪಕ ವಿತರಣೆ 'ಏಕಾಗುತ್ತದೆ ಎನ್ನುವುದಕ್ಕೆ ವೈಜ್ಞಾನಿಕವಾಗಿಯೂ ಸ್ಪಷ್ಟ ಕಾರಣಗಳಿಲ್ಲವೆನ್ನಲಾಗುತ್ತದೆ.[2]

ಆದರೂ ಈ ಅಧ್ಯಯನದ ವೇಳೆಯಲ್ಲಿ ಈ ಕುರಿತು ನಾನು ಎರಡು ಕಾರಣಗಳನ್ನು ಊಹಿಸಿದ್ದೇನೆ –

1. ಪರಿಸರಾತ್ಮಕ (ecological) ಕಾರಣ: ಅಂದರೆ ಬಹುಕಾಲ ಅನುಭವಿಸ ಬೇಕಾದ ಅಧಿಕ ಉಷ್ಣಾಂಶ.

2. ಅಜ್ಞಾನ (ಅನಕ್ಷರತೆ): ಅಂದರೆ ಸೂಲಗಿತ್ತಿಯರು ನಡೆಸುವ ಹೆರಿಗೆ.

ಅಧಿಕ ಉಷ್ಣಾಂಶವು ದೈಹಿಕವಾಗಿ ಅನೇಕ ಉತ್ಪಾತಗಳನ್ನು ಮಾಡುವ ಸಾಧ್ಯತೆಗಳಿರುವುದರಿಂದ ಹೀಗೆ ಊಹಿಸಲಾಗಿದೆ. ಹಾಗೆಯೇ ಸೂಲಗಿತ್ತಿಯರು ನಡೆಸುವ ಹೆರಿಗೆಯಿಂದಾಗಿ ನವಜಾತ ಶಿಶುವಿಗೆ ಜನನ ಕಾಲದಲ್ಲೇ ಅನೇಕ ಊನತೆಗಳುಂಟಾಗುವ ಸಾಧ್ಯತೆಗಳನ್ನು ನಿರಾಕರಿಸಲಾಗುವುದಿಲ್ಲ.

ಆದರೆ ಇವೆರಡೂ ಕೇವಲ ಮೊದಲ ನೋಟದ ಊಹಾತ್ಮಕ ಕಾರಣಗಳಷ್ಟೇ ಎಂದು ಮತ್ತೊಮ್ಮೆ ಸ್ಪಷ್ಟ ಪಡಿಸುತ್ತೇನೆ.

ಅಧ್ಯಾಯ – 5

ಗಂಡು ಜೋಗಮ್ಮರು:

ಇಲ್ಲಿಯವರೆಗಿನ ಸುದೀರ್ಘ ವಿವರಗಳಿಂದ ಹೊಸಪೇಟೆಯ ಗಂಡು ಜೋಗಮ್ಮರ ಕುರಿತ ಪ್ರಸ್ತಾವನೆಗೆ ಹಿನ್ನೆಲೆಯಾಯಿತು. ಮಹಾಭಾರತ ಮತ್ತು ಕಾಮಶಾಸ್ತ್ರಗಳಲ್ಲಿ ನಪುಂಸಕರ ಕುರಿತು ವೈಜ್ಞಾನಿಕವಾದ ವಿವರಣೆಗಳೇ ಇವೆ. ಶಿಖಂಡಿ ಮೊದಲು ಗಂಡಾಗಿ ಹುಟ್ಟಿ ಆಮೇಲೆ ಹೆಣ್ಣಾದ ಎನ್ನುವ ಮಹಾಭಾರತದ ವಿವರವಾಗಲೀ ಗಂಡಸರಂತೆ ತೋರುವ ಒಂದು ವರ್ಗ ಹಾಗೂ ಮಹಿಳೆಯರಂತೆ ತೋರುವ ಇನ್ನೊಂದು ವರ್ಗವಿದೆ ಎನ್ನುವ ವಾತ್ಸ್ಯಾಯನನ ತೀರ್ಮಾನವಾಗಲೀ ಪೌರಾಣಿಕ ಕಲ್ಪನೆಗಳಲ್ಲ. ಆದರೆ ಇಂತಹ ನಪುಂಸಕರು ಹೊಸಪೇಟೆಯಲ್ಲಿ ನನ್ನ ಗಮನಕ್ಕೆ ಬಂದಿಲ್ಲ. ವಾತ್ಸ್ಯಾಯನನ ಹೇಳುವ ಮಹಿಳೆಯರಂತೆ ತೋರುವ ವರ್ಗವಷ್ಟೇ ಇಲ್ಲಿದೆ.

ಅಂದರೆ ನನ್ನ ಗಮನಕ್ಕೆ ಬಂದಿರುವ ಎಲ್ಲ ಗಂಡು ಜೋಗಮ್ಮರೂ ಮೂಲತಃ ಗಂಡಸರೇ. ಯಾವುದೇ ಕಾರಣದಿಂದ ತಮ್ಮನ್ನು ಗಂಡಸರಂತೆ ಗುರುತಿಸಿ ಕೊಳ್ಳಲಾಗದೆ ಮಾನಸಿಕವಾಗಿ ಹೆಣ್ಣಾದವರು.

5.1 ವೇಷಭೂಷಣಗಳು:

ಗಂಡು ಜೋಗಮ್ಮರು ಹೆಣ್ಣಿನಂತೆಯೇ ವೇಷ ಭೂಷಣ ಮಾಡುತ್ತಾರೆ. ಸೀರೆ ಕುಬುಸ, ಲಂಗ ದಾವಣಿ, ಹಾಫ್ ಸಾರಿ, ಕುಂಕುಮ ಸಾಮಾನ್ಯವಾಗಿ ಇವರ ವೇಷ ಭೂಷಣಗಳು. ಕೆಲವರು ಹೆಣ್ಣಿನಂತೆಯೇ ಜಡೆ ನೇಯ್ಗೆ ಮಾಡಿಕೊಂಡರೆ ಮತ್ತೆ ಕೆಲವರು ತುರುಬು ಕಟ್ಟಿಕೊಳ್ಳುತ್ತಾರೆ.

ಇನ್ನೂ ಕೆಲವರು ಈ ರೀತಿಯಾಗಿ ಪೂರ್ಣ ಪ್ರಮಾಣದಲ್ಲಿ ಸ್ತ್ರೀಯ ಉಡುಗೆ ತೊಡುಗೆ ಮಾಡಿ ಕೊಂಡಿಲ್ಲವೆಂದಾದರೆ ಸೀರೆಯನ್ನು ಕಚ್ಚೆ ಹಾಕಿ ತೊಟ್ಟು ಮೈಮೇಲೆ ಅಂಗಿ ಧರಿಸುತ್ತಾರೆ.

ಗಂಡಸಿಗೆ ಅಸಹಜವಾದ ಅನೇಕ ಲಕ್ಷಣಗಳಿಂದ ಇವರು ಪ್ರತ್ಯೇಕವಾಗಿ ಕಾಣಿಸುತ್ತಾರೆ. ಕೆಲವರಿಗೆ ಗಡ್ಡ ಮೀಸೆಗಳಿರುವುದಿಲ್ಲ; ಕೋಮಲ ಸ್ವರ, ಮುಖ್ಯವಾಗಿ ಸಮತಲವಾದ ಎದೆ, ರೋಮರಹಿತ ಕೈಕಾಲುಗಳು, ಬಲಿಷ್ಠ ಮಾಂಸ ಖಂಡಗಳು ಇವರ ಬಾಹ್ಯ ಲಕ್ಷಣಗಳು.

ತರುಣ ಗಂಡು ಜೋಗಮ್ಮರು ವ್ಯಕ್ತಪಡಿಸುವ ವಿಪರೀತ ನಾಚಿಕೆಯ ಸ್ವಭಾವದಿಂದಲೇ ಅವರನ್ನು ಗುರುತಿಸಬಹುದು. ಆದರೆ ಮಧ್ಯ ವಯಸ್ಸಿನ ಜೋಗಮ್ಮರದು ಇದಕ್ಕಿಂತ ತದ್ವಿರುದ್ಧ ವರ್ತನೆ. ಜಾತ್ರೋತ್ಸವಗಳ ಸಂದರ್ಭದಲ್ಲಿ ನಾಚಿಕೆಯಿಲ್ಲದೆ ಸೀರೆ ಎತ್ತಿ ಸೊಂಟದ ಕೆಳ ಭಾಗಗಳನ್ನು ಪ್ರದರ್ಶಿಸುತ್ತಾರೆ. ಇವರ ಇನ್ನೊಂದು ವರ್ತನೆಯೆಂದರೆ ಎಗ್ಗಿಲ್ಲದೆ ಅಶ್ಲೀಲ ಶಬ್ದಗಳನ್ನು ಪ್ರಯೋಗಿಸುವುದು. ಆದರೆ ಇದಾವುದನ್ನೂ ತೋರಿಸದೆ ಹೆಂಗಸರಂತೆ ಸಹಜವಾದ ಗಂಭೀರತೆಯನ್ನು ವ್ಯಕ್ತ ಪಡಿಸುವ ಗಂಡುಜೋಗಮ್ಮರೂ ಇದ್ದಾರೆ.

5.2 ವಿವಿಧ ಮಾದರಿಗಳು:

ಗಂಡು ಜೋಗಮ್ಮರಲ್ಲಿ ಬೇರೆ ಬೇರೆ ಬಗೆಯವರಿದ್ದಾರೆ. ಕೆಲವರು ಹುಟ್ಟಿನಿಂದಲೇ ಈ ಗುಣಗಳನ್ನು ಪಡೆದುಕೊಂಡು ಬಂದಿರುತ್ತಾರೆ. ಅಂದರೆ ಹುಡುಗಿಯರೊಂದಿಗೆ ಹೆಚ್ಚು ಬೆರೆಯುವುದು, ಗಂಡಸರನ್ನು ಕಂಡರೆ ನಾಚಿಕೆ ಪಡುವುದು, ಹುಡುಗಿಯರಂತೆಯೇ ವೇಷ ಭೂಷಣ ಮಾಡುವುದು ಇತ್ಯಾದಿಗಳನ್ನು ಬಾಲ್ಯದಿಂದಲೇ ರೂಢಿಸಿ ಕೊಂಡಿರುತ್ತಾರೆ. ಅಂತಹವರು ಮದುವೆಯಾಗಿರುವುದಿಲ್ಲ.

ಇನ್ನೂ ಕೆಲವರು ವಿವಾಹೋತ್ತರವಾಗಿ ಗಂಡು ಜೋಗಮ್ಮರಾಗುತ್ತಾರೆ. ಮಕ್ಕಳನ್ನು ಪಡೆದ ಮೇಲೆಯೂ ಇವರು ಗಂಡು ಜೋಗಮ್ಮರಾಗುತ್ತಾರೆ. ಇಂತವರಿಗೆ ಆಮೇಲೆ ತಮ್ಮ ಹೆಂಡತಿಯರೊಂದಿಗೆ ಯಾವ ಲೈಂಗಿಕ ಸಂಪರ್ಕವೂ ಇರುವುದಿಲ್ಲ.

---

53 ದೇವರ ಕಟ್ಟಿಸಿ ಕೊಳ್ಳುವುದು:

ಇದು ಗಂಡು ಜೋಗಮ್ಮರಾಗುವುದಕ್ಕೆ ಸಮಾಜ ನೀಡುವ ಒಪ್ಪಿಗೆಗೆ ಸಂಬಂಧಿಸಿದುದು. ಹುಟ್ಟಿನಿಂದಲೇ ಗಂಡು ಮಗುವೊಂದು ಗಂಡಿಗೆ ಸಹಜವಲ್ಲದ ಲಕ್ಷಣಗಳನ್ನು ವ್ಯಕ್ತಪಡಿಸುತ್ತಿದ್ದರೆ ಹಿರಿಯರ ಅನುಮತಿಯ ಮೇರೆಗೆ ಗಂಡು ಜೋಗಮ್ಮರಾಗುವುದಕ್ಕೆ ಅವಕಾಶವಾಗುತ್ತದೆ. ಹೀಗೆ ಗಂಡು ಜೋಗಮ್ಮರಾಗುವುದಕ್ಕೆ ಧಾರ್ಮಿಕವಾಗಿ ದೇವರ ಕಟ್ಟಿಕೊಳ್ಳುವುದು, ತಾಳಿ ಕಟ್ಟೋದು ಎನ್ನುತ್ತಾರೆ.

ದೇವರ ಕಟ್ಟಿಕೊಳ್ಳುವುದಕ್ಕೆ ಮೊದಲು ಆ ವ್ಯಕ್ತಿಗೆ ಸ್ವತಃ ದೇವರೇ ಮೈಮೇಲೆ ಬರಬಹುದು, ಇಲ್ಲವೇ ಬೇರೆಯವರಿಗೆ ಮೈದುಂಬಿ ಸಲಹೆ ಕೊಡಬಹುದು. ಕೆಲವೊಮ್ಮೆ ಯಾರಾದರೂ ಜೋಗಮ್ಮನೇ ಸೂಚನೆ ನೀಡಬಹುದು. ಇಲ್ಲವೇ ಹಿರಿಯರೇ ತೀರ್ಮಾನ ತೆಗೆದುಕೊಂಡು, ಅಥವಾ ಪೂಜಾರಿಯು ಹೇಳಿಕೆಯ ಮೇರೆಗೆ ದೀಕ್ಷೆ ತೆಗೆದು ಕೊಳ್ಳಬಹುದು.

5.4 ವಿಧಿ — ವಿಧಾನಗಳು:

ಗಂಡು ಜೋಗಮ್ಮರಾಗುವುದಕ್ಕೆ ನಿಶ್ಚಯಿಸಿದ ಮೇಲೆ ಸಮೀಪದ ದೇವಿಯ ಗುಡಿಗೆ ಕರೆದೊಯ್ಯಲಾಗುತ್ತದೆ. ದೇವಿಯ ಸಾನಿಧ್ಯದಲ್ಲಿ ದೇವದಾಸಿ ಹಾಗೂ ಜೋಗತಿಯರಿಗೆ ಮಾಡುವ ಎಲ್ಲಾ ದೀಕ್ಷಾ ಕ್ರಮಗಳು ಇವರಿಗೆ ಅನ್ವಯಿಸುತ್ತವೆ.

ಮನೆಯವರು ತೆಗೆದು ಕೊಂಡು ಹೋದ ತಾಳಿಯನ್ನು ಗಂಡು ಜೋಗಮ್ಮನ ಪರವಾಗಿ ಪೂಜಾರಿಯು ದೇವಿಗೆ ಕಟ್ಟುತ್ತಾನೆ. ಆಗ ದೇವಿಗೆ ಪೂಜಾರಿ ಹೇಳಿದಷ್ಟು ದಕ್ಷಿಣೆ ಕೊಡ ಬೇಕಾಗುತ್ತದೆ. ಒಬ್ಬ ಮಾಹಿತಿದಾರರು ಹೇಳಿರುವಂತೆ 5000 ರೂಪಾಯಿ ದಂಡ ತೆತ್ತು ತಾಳಿ ಕಟ್ಟಲಾಗಿದೆ. ಹೀಗೆ ದಂಡ ಕೊಟ್ಟರೆ ಒಳ್ಳೆಯದೆಂಬ ನಂಬಿಕೆ ಅವರದು.

ಹೀಗೆ ತಾಳಿ ಕಟ್ಟಿದ ಮೇಲೆ ದೇವಿಯ ಪಟ್ಟಿಗೆ ಶಾಸ್ತ್ರೋಕ್ತವಾಗಿ ಅವರಿಗೆ ಲಭಿಸುತ್ತದೆ. ಆಮೇಲೆ 'ಜೋಗ್ಪಂಕ್ತಿ' ಯೆಂಬ ಆಚರಣೆಯಿರುತ್ತದೆ.

'ಜೋಗ್ಪಂಕ್ತಿ' ಯು ಹೆಸರೇ ಹೇಳುವಂತೆ ಜೋಗಮ್ಮರ ಪಂಕ್ತಿ. ಈ ಪಂಕ್ತಿಯಲ್ಲಿ ಪಾಲ್ಗೊಳ್ಳಲು ಕನಿಷ್ಠ ಪಕ್ಷ ಐದು ಮಂದಿ ಜೋಗಮ್ಮರಾದರೂ ಇರಬೇಕು. ಅವರಿಗೆ ತಾಳಿ ಕಟ್ಟಿಸಿಕೊಳ್ಳುವ ಗಂಡು ಜೋಗಮ್ಮನ ಪರವಾಗಿ ಮನೆಯವರು ಊಟ ನೀಡುತ್ತಾರೆ.

ದೇವಿಗೆ ತಾಳಿ ಕಟ್ಟಿಸಿ ಕೊಂಡ ಕ್ಷಣದಿಂದ ಆಕೆಗೆ ಸೀರೆ ಕುಬುಸ, ಬಳೆ, ಕಾಲುಂಗುರ ಹೀಗೆ ಜೋಗಮ್ಮನಿಗೆ ಸಹಜವಾದ ಎಲ್ಲ ಉಡಿಗೆ — ತೊಡಿಗೆಗಳೂ ದೊರೆಯುತ್ತವೆ. ಜೋಗ್ಪಂಕ್ತಿಯಾದ ಮೇಲೆ ಅಧಿಕೃತವಾಗಿ ಆತ ಗಂಡು ಜೋಗಮ್ಮನಾಗುತ್ತಾನೆ.

ತಾಳಿಯಿಲ್ಲದ ವೇಳೆ (ಇನ್ನು ಮುಂದೆ ಪ್ರಬಂಧದುದ್ದಕ್ಕೂ ಆಕೆಯೆಂದೇ ಸಂಬೋಧಿಸಲಾಗುವುದು) ಆಕೆಯನ್ನು ಸಂಬಂಧಿಸಿದವರು ಇಷ್ಟ-ಪಟ್ಟರೆ ತಮ್ಮ-ತಮ್ಮ ಮನೆಗೆ ಕರೆದು ಕೊಂಡು ಹೋಗುತ್ತಾರೆ. ಜೋಗಮ್ಮ ಮನೆಗೆ ಬಂದರೆ ಶುಭವಾಗುವುದೆಂಬ ನಂಬಿಕೆಯಿಂದಲೂ ಇತರರೂ ಆಕೆಯನ್ನು ಕರೆದುಕೊಂಡು ಹೋಗಬಹುದು.

ಜೋಗ್ಯಂಕ್ತಿಯಿಲ್ಲದ ವೇಳೆ 'ಮುಂದೇನು' ಎಂಬ 'ಸೂಕ್ಷ್ಮ' ಪ್ರಶ್ನೆಗೆ ಎಲ್ಲರದೂ ಒಂದೇ ರೀತಿಯ ಉತ್ತರವಲ್ಲ. ಒಬ್ಬಳು ಗಂಡು – ಜೋಗಮ್ಮನ ಪ್ರಕಾರ ತನಗೆ ಮೊದಲು ದೇವಿಗೆ ತಾಳಿ ಕಟ್ಟಿದರೂ ಆ ವೇಳೆ ಅದೇ ತಾಳಿಯನ್ನು ಪುರುಷನೊಬ್ಬ ಕಟ್ಟಿದ. ಅಂದು ರಾತ್ರಿ ಅವರಿಗೆ ಪ್ರಸ್ತವೂ ಆಯಿತು. ಆಕೆ ಸ್ವತಃ ಒಪ್ಪಿ ಕೊಳ್ಳುವಂತೆ ಈಗಲೂ ಅವಳಿಗೆ 'ಯಜಮಾನ' ಇದ್ದಾನೆ. ಅವರೀರ್ವರು ಗಂಡ ಹೆಂಡತಿಯರಂತೆಯೇ ಅನ್ಯೋನ್ಯವಾಗಿದ್ದಾರೆ.

ಇನ್ನೊಬ್ಬಳ ಪ್ರಕಾರ ತಾಳಿಯನ್ನು ಸೋದರ ಮಾವ ಇಲ್ಲವೇ ಇತರ ಸಂಬಂಧಿಕರು ಕಟ್ಟುತ್ತಾರೆ. ಅಂದು ಅವರೊಂದಿಗೆ ಈಕೆ ರಾತ್ರಿಯನ್ನು ಕಳೆಯುತ್ತಾಳೆ. ಮನಸ್ಸಾದರೆ ಆ ವೇಳೆ ಬೇರೆಯವರೊಂದಿಗೆ ಲೈಂಗಿಕ ಸಂಪರ್ಕ ವನ್ನಿಟ್ಟು ಕೊಳ್ಳಬಹುದು.

ಆದರೆ ಇತರರು ಇದನ್ನು ಪೂರ್ಣವಾಗಿ ನಿರಾಕರಿಸಿದರು. ನಾವು ಹೆಂಗಸರೇ ಅಲ್ಲವೆಂದ ಮೇಲೆ ಬೇರೆಯವರು ತಾಳಿ ಕಟ್ಟುವುದು, ಪ್ರಸ್ಥ ಮಾಡುವುದು ಎಲ್ಲಿಯ ಮಾತು? ನಮಗೆ ಅದು ಗೊತ್ತೇ ಇಲ್ಲವೆಂಬುದು ಅವರ ಖಚಿತ ತೀರ್ಮಾನ.

ಅದೇನೇ ಇದ್ದರು ತಾಳಿ ಕಟ್ಟಿದ ಮೇಲೆ ಆಕೆ ದೇವಿಯ ಭಕ್ತಳಾದಳು. ಅದರಂತೆ ದೇವಿಯ ಭಕ್ತರಿಗೆ ಸಂಬಂಧಿಸಿದ ಎಲ್ಲ ಆಚರಣೆಗಳನ್ನೂ ಮಾಡಬೇಕು. ಅವುಗಳಲ್ಲಿ ಮುಖ್ಯವಾದುದು 'ಊರಾಡುವುದು'

ಊರಾಡುವುದು ಶಬ್ದಶಃ ಹೇಳುವಂತೆ ಊರನ್ನು ಸುತ್ತುವುದು. ಇದು ಧಾರ್ಮಿಕ ಪರಿಭಾಷೆಯಾದರೆ ಅದರ ಲೌಕಿಕ ಸ್ವರೂಪ ಭಿಕ್ಷಾಟನೆ. ಎಷ್ಟೇ ಶ್ರೀಮಂತರಾದರೂ ಕನಿಷ್ಠ ಪಕ್ಷ ಶುಕ್ರವಾರ, ಮಂಗಳವಾರ, ಗುರುವಾರ ಭಿಕ್ಷಾಟನೆಗೆ

ತೊಡಗ ಬೇಕೆಂಬುದು ನಿಯಮ. ಇಂತಹ ಸಂದರ್ಭದಲ್ಲಿ ತಾವಿರುವ 'ಓಣಿಯಲ್ಲೇ ಭಿಕ್ಷಾಟನೆ ಮಾಡುವವರು, ಇಡೀ ಊರನ್ನೇ ಸುತ್ತಿ ಬರುವವರೂ ಇರುತ್ತಾರೆ. ಹೀಗೆ ಊರನ್ನೇ ಸುತ್ತುವುದು ಮತ್ತು ತಾವಿರುವ ಸುತ್ತಮುತ್ತಲಷ್ಟೇ ತಿರುಗುವುದು ಅವರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯನ್ನು ಅವಲಂಬಿಸಿರುತ್ತದೆ.

5.5 ಸಾಮಾಜಿಕ – ಆರ್ಥಿಕ ಹಿನ್ನೆಲೆ:

ತಾಲೂಕಿನಲ್ಲಿರುವ ಜೋಗತಿ, ದೇವದಾಸಿ ಸಂಪ್ರದಾಯಸ್ಥರ ಸಂಖ್ಯೆಯನ್ನು ಗಮನಿಸಿದರೆ ಸಾಮಾಜಿಕ ಸ್ಥಾನಮಾನ, ಆರ್ಥಿಕ ಸ್ಥಿತಿಗತಿಗೆ ಸ್ಪಷ್ಟ ಸಂಬಂಧಗಳಿರುವುದು ಗೊತ್ತಾಗುತ್ತದೆ. ಆದರೆ ಗಂಡು ಜೋಗಮ್ಮರ ಪರಿಸ್ಥಿತಿ ಇದಕ್ಕಿಂತ ತೀರಾ ಭಿನ್ನವಾದುದು.

ಗಂಡು ಜೋಗಮ್ಮರು ಯಾರೂ ಆಗಬಹುದು. ಮುಸ್ಲಿಮ, ಕ್ರೈಸ್ತ, ಹರಿಜನ, ಲಿಂಗಾಯತ, ಬೇಡ ಹೀಗೆ ತಾಲೂಕಿನಲ್ಲಿರುವ ಜಾತಿ ಮತ ಬೇಧವಿಲ್ಲದೆ ಯಾರೂ ಬೇಕಾದರೂ ಗಂಡು ಜೋಗಮ್ಮರಾಗಬಹುದು.[1] ಇದಲ್ಲದೆ ಆರ್ಥಿಕತೆಗೂ ಇದಕ್ಕೂ ಯಾವ ಸಂಬಂಧಗಳೂ ಇರುವುದಿಲ್ಲ. ಶ್ರೀಮಂತ ಜಾತಿಯವರಲ್ಲಿಯೂ ಗಂಡು ಜೋಗಮ್ಮರಿರುತ್ತಾರೆ.[2]

ಮುಸ್ಲಿಂ, ಕ್ರೈಸ್ತ ಅಥವಾ ಯಾವುದೇ ಧರ್ಮದವರಾಗಿದ್ದರೂ ಗಂಡು ಜೋಗಮ್ಮರಾದ ಮೇಲೆ ಸ್ತ್ರೀಯ ಸಂಪ್ರದಾಯವನ್ನು ಆಚರಿಸುವುದು ಇಲ್ಲಿಯ ಕ್ರಮ. ಇವರೆಲ್ಲರೂ ಹುಲಿಗೆಮ್ಮನಿಗೋ, ಎಲ್ಲಮ್ಮನಿಗೂ ಉಧೋ ಆಗಿರುತ್ತಾರೆ.[3]

5.6 ಜೋಗಮ್ಮ – ಗಂಡುಜೋಗಮ್ಮ, ಜೋಗಪ್ಪ ಮತ್ತು ದೇವದಾಸಿಯರು:

ತಾಲೂಕಿನಲ್ಲಿ ಇವು ನಾಲ್ಕು ಸಂಪ್ರದಾಯಗಳೂ ಪರಸ್ಪರ ಪೂರಕ. ಮಗಳಿಗೆ ಜಡೆ ಬಂದರೆ ಆಕೆಯನ್ನು ಜೋಗತಿಯಾಗಿ ಬಿಡಲಾಗುತ್ತದೆ. ದೇವದಾಸಿಯಾಗಬೇಕಾದರೆ ಈ ಗುಣ ಲಕ್ಷಣದೊಂದಿಗೆ ಇನ್ನಿತರ ಅಂಶಗಳೂ ಪ್ರೇರಕವಾಗುತ್ತವೆ. ಅವುಗಳೆಂದರೆ –

1. ಸತತವಾಗಿ ಮನೆಗೆ ಒದಗುವ ಗಂಡಾಂತರದಿಂದ ತಂದೆ – ತಾಯಿ ಯರು ತಾವಾಗಿಯೇ ಹೆಣ್ಣು ಮಗುವನ್ನು ಹರಕೆಯೊಪ್ಪಿಸುವುದು.

2. ಮಗಳಿಗೆ ದೇವಿ ತಾನೇ ಮೈಮೇಲೆ ಬಂದು ತಾಳಿ ಕಟ್ಟಿಸುವುದು.

3. ಎಲ್ಲರೂ ಹೆಣ್ಣು ಮಕ್ಕಳೇ ಆದರೆ ಗಂಡು ಮಕ್ಕಳ ಸಲುವಾಗಿ ಕಿರಿಯವಳನ್ನು ಹೆತ್ತವರು ದೇವಿಗೆ ಅರ್ಪಿಸುವುದು.

4. ಪಾರಂಪರಿಕವಾಗಿಯೂ ನಡೆದುಕೊಂಡು ಬರುವುದು.

ಇದರೊಂದಿಗೆ 'ಜೋಗಪ್ಪ' ನೆಂಬ ಸಂಪ್ರದಾಯವೂ ಅಸ್ತಿತ್ವದಲ್ಲಿದೆ. ಈ 'ಜೋಗಪ್ಪ' ಸ್ಪಷ್ಟವಾಗಿ ಗಂಡಸಿನ ಲಕ್ಷಣಗಳನ್ನು ವ್ಯಕ್ತಪಡಿಸುತ್ತಾನಲ್ಲದೆ ಯಾವುದೇ ರೀತಿಯ ಜೈವಿಕ ಅಥವಾ ಮಾನಸಿಕ ನ್ಯೂನತೆಗಳಿಗೆ ಒಳಗಾಗುವುದಿಲ್ಲ. ಜೋಗಪ್ಪನ ಒಂದೇ ಒಂದು ಲಕ್ಷಣವೆಂದರೆ ಆತನಿಗೂ ಜಡೆ ಬೆಳೆದಿರುತ್ತದೆ.

ಈ ದೃಷ್ಟಿಯಿಂದ ಗಂಡು ಜೋಗಮ್ಮರು ಎದ್ದು ಕಾಣುವ (ಈಗಾಗಲೇ ವಿವರಿಸಿದ) ಅನೇಕ ಲಕ್ಷಣಗಳೊಂದಿಗೆ ಪರಸ್ಪರ ಸಮಾನವಾದ ಧಾರ್ಮಿಕ ನೆಲೆಯನ್ನು ಹೊಂದಿರುತ್ತಾರೆ. ದೇವದಾಸಿ, ಜೋಗಮ್ಮರಂತೆ ತಾವೂ ಚಿರ ಮುತ್ತೈದೆಯರೆಂದು ಕೊಳ್ಳುತ್ತಾರೆ. ಆಂದರೆ ಈ ಎಲ್ಲ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಒಂದೇ ಒಂದು ಅಭಯ ಹಸ್ತವಿರುತ್ತದೆ. ಅದು ಯಾರಾದರೂ ಹೆಣ್ಣು ದೇವತೆ ಯಾಗಿರುತ್ತದೆ.

ಹುಲಿಗೆವ್ವ, ಎಲ್ಲಮ್ಮ, ಗಾಳೆಮ್ಮನವರು ಈ ಎಲ್ಲ ಸಂಪ್ರದಾಯಗಳಿಗೂ ಮೂಲ ನೆಲೆಯಾಗಿರುತ್ತಾರೆ. ಈ ದೇವತೆಯರ ಬಗೆಗೆ ಗಂಡು ಜೋಗಮ್ಮನವರಲ್ಲಿ ತಮ್ಮದೇ ಆದ ಶ್ರೇಣೀಕರಣವೊಂದಿದೆ. ಅದರ ಪ್ರಕಾರ –

ಎಲ್ಲಮ್ಮ – ಹುಲಿಗೆಮ್ಮ – ಗಾಳೆಮ್ಮ – ದುರುಗಮ್ಮ – ಮರಿಯಮ್ಮ – ವಸ್ತ್ರಮ್ಮ – ಊರಮ್ಮ – ಅತ್ತೆಕಾಯಮ್ಮ.

ಈ ಶ್ರೇಣೀಕರಣದಲ್ಲಿ ಎಲ್ಲಮ್ಮನೇ ಹೆಚ್ಚಿನವಳು. ಆಕೆಯದು ಹೆಚ್ಚಿನ ಆರ್ಭಟ. ಆಕೆ ಮುನಿಸು ಮಾಡಿದರೆ ಸಾಯುವ ವರೆಗೆ ಬಿಡುವುದಿಲ್ಲ. ಆದರೆ ಹುಲಿಗೆಮ್ಮ ಈ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ಸರಳ. ಆಕೆ ತನ್ನ ಭಕ್ತನ ನಿರ್ಮಲ

ಭಕ್ತಗೆ ಹಿಡಿದರೆ 15 ವರ್ಷ, ಆಮೇಲೆ 10 ವರ್ಷ ಇಲ್ಲವೇ 5 ವರ್ಷವಷ್ಟೇ ಇರುತ್ತಾಳೆ.

ಅಂದರೆ ಈಗ ತಮಗೆ ದೇವರು ತುಂಬಿದೆ ಅಂತಲೇ ಇವರು ಭಾವಿಸುತ್ತಾರೆ. ದೇವರು ಹೋದ ಮೇಲೆಯೂ ಆಕೆ ಹೆಸರಲ್ಲಿ ನಾವು ಜೀವನ ಮಾಡುತ್ತೇವೆ ಎನ್ನುತ್ತಾರೆ.

5.7 ಮೂಲಕತೆ:

ಇದನ್ನು ಒಬ್ಬೊಬ್ಬರು ಒಂದೊಂದು ರೀತಿಯಾಗಿ ಹೇಳುತ್ತಾರೆ. ಕೆಲವರ ಪ್ರಕಾರ ಜಮದಗ್ನಿ ರೇಣುಕೆಯ ಪಾತಿವ್ರತ್ಯವನ್ನು ಶಂಕಿಸಿ ತನ್ನ ಮಕ್ಕಳಿಗೆ ತಲೆ ಕಡಿಯುವುದಕ್ಕೆ ಹೇಳುತ್ತಾನೆ. ಪರಶುರಾಮನನ್ನುಳಿದು ಉಳಿದ ಮಕ್ಕಳು ತಾಯಿಯ ತಲೆ ಕಡಿಯುವುದಕ್ಕೆ ನಿರಾಕರಿಸಿದರು. ಜಮದಗ್ನಿ ಅವರಿಗೆ ನಪುಂಸಕರಾಗಿರೆಂದು ಶಾಪವಿತ್ತ, ಅಲ್ಲಿಂದ ಮುಂದೆ ಈ ಪರಂಪರೆ ಬೆಳೆಯಿತು.

ಜಮದಗ್ನಿಯ ಹೆಂಡತಿ ರೇಣುಕೆ ಬಸುರಿಯಾದಾಗ ಆಕೆಗೆ ಸಹಾಯಕರಾಗಿ ಯಾರೂ ಸೂಲಗಿತ್ತಿಯರಿರಲಿಲ್ಲ. ಆಗ ರೇಣುಕೆಯ ತಮ್ಮಂದಿರಾದ ಏಕಯ್ಯ – ಜೋಗಯ್ಯರು ಸ್ತ್ರೀವೇಷ ಧರಿಸಿ ಅವಳಿಗೆ ಸೂಲಗಿತ್ತಿಯರಾದರು. ಅವರಿಂದ ಮುಂದೆ ಈ ಪರಂಪರೆ ಬೆಳೆಯಿತು.

ಜಮದಗ್ನಿ ಮಹರ್ಷಿಯ ಶಾಪದಿಂದ ಎಲ್ಲಮ್ಮನಿಗೆ ಕುಷ್ಠ ರೋಗ ಉಂಟಾಯಿತು. ಆಗ ಆಕೆ ತನ್ನ ತಮ್ಮಂದಿರಾದ ಏಕಯ್ಯ ಜೋಗಯ್ಯನವರಲ್ಲಿಗೆ ಬಂದಳು. ಅವರೂ ಅವಳನ್ನು ದೂರೀಕರಿಸಿದರು. ಇದರಿಂದ ಮುನಿದ ಆಕೆ ಅವರಿಗೆ ಶಾಪ ಕೊಟ್ಟಾಗ ಅವರ ಪುರುಷತ್ವ ಹರಣವಾಗುತ್ತದೆ.

5.8 ಆಭರಣೆಗಳು – ಸಾಮಾಜಿಕ:

ಗಂಡು ಜೋಗಮ್ಮರಿಗೆ ಮುಖ್ಯವಾದ ಆಭರಣೆಯೆಂದರೆ 'ತಾಳಿ ಕಟ್ಟೋದು' ಮತ್ತು 'ಜೋಗ್ಪುಂಕ್ತಿ' ಇವುಗಳ ಬಗೆಗೆ ಈಗಾಗಲೇ ವಿವರಿಸಿದ್ದಾಯಿತು. ಅವರಿಗೆ ಸಂಬಂಧಿಸಿದ ಇನ್ನೊಂದು ಮುಖ್ಯ ಆಭರಣ ಎಂದರೆ 'ಸಾವು'.

ಯಾರೇ ಗಂಡು ಜೋಗಮ್ಮ ಸತ್ತಾಗಲೂ ಹೆಣವನ್ನು ಸಂಬಂಧಿಕರು ಮುಟ್ಟುವಂತಿಲ್ಲ. ಸಾವಿಗೆ ಸಂಬಂಧಿಸಿದ ಎಲ್ಲ ಕ್ರಿಯೆಗಳನ್ನು ಜೋಗಮ್ಮಗಳೇ ಮಾಡುತ್ತಾರೆ. ಜೋಗಮ್ಮರ ಮುಂದಾಳ್ತನದಲ್ಲಿ ಉತ್ತರ ಕ್ರಿಯೆಯ ಎಲ್ಲ ವಿಧಿವಿಧಾನಗಳು ನಡೆಯುತ್ತವೆ.

5.9. ಆಚರಣೆಗಳು — ಧಾರ್ಮಿಕ:

ಗಂಡು ಜೋಗಮ್ಮರ ಧಾರ್ಮಿಕ ಆಚರಣೆಯಲ್ಲಿ ಭಿಕ್ಷಾಟನೆಯೂ ಮುಖ್ಯವಾದುದು 'ಊರಾಡುವುದು' ಎಂದು ಕರೆಯಲಾಗುವ ಈ ಸಂಪ್ರದಾಯ ಗಂಡು ಜೋಗಮ್ಮರ ಬದುಕಿನ ಅವಿಭಾಜ್ಯ ಅಂಗ. ಎಲ್ಲಮ್ಮ ಜಮದಗ್ನಿಯಿಂದ ಪರಿತ್ಯಕ್ತಳಾದ ಕಾಲಕ್ಕೆ ಭಿಕ್ಷಾಟನೆ ಅನಿವಾರ್ಯವಾಯಿತು. — ಹಾಗಾದುದರಿಂದ ಅವಳ ಅನುಯಾಯಿಗಳಿಗೂ ಅದು ಸೇರ್ಪಡೆಯಾಯಿತು.

ಇದರೊಂದಿಗೆ ಕಣಿ ಹೇಳುವುದು, ಹಾಗೂ ಹೆಂಗಸರಿಗೆ 'ಭಂಡಾರ' ಇಡುವುದು ಧಾರ್ಮಿಕ ವಲಯದಲ್ಲಿಯೇ ಸೇರ್ಪಡೆಯಾಗುತ್ತವೆ. ಗಂಡು – ಜೋಗಮ್ಮರು ನೀಡುವ ಭಂಡಾರದ ಬಗೆಗೆ ಎಲ್ಲರಿಗೂ ನಂಬಿಕೆಯಿದೆ.

5.10. ನಂಬಿಕೆಗಳು:

ಈಗಾಗಲೇ ಹೇಳಿರುವಂತೆ ಗಂಡು ಜೋಗಮ್ಮರು ಮನೆಗೆ ಬಂದರೆ ಶುಭವಾಗುವುದೆಂಬ ಭಾವನೆಯಿದೆ. ಅದರೊಂದಿಗೆ ಗಂಡು ಜೋಗಮ್ಮರು ಎಲ್ಲಮ್ಮನ ಭಕ್ತರಾದುದರಿಂದ ಅವರನ್ನು ಅವಹೇಳನ ಮಾಡಬಾರದು ಎಂದೂ ತಿಳಿಯಲಾಗುತ್ತದೆ.

ಊರಲ್ಲಿ ಯಾರೂ ಸತ್ತರೂ ಇವರು ಉಪವಾಸ ಆಚರಿಸುತ್ತಾರೆ. ಎಷ್ಟೇ ಕಷ್ಟವಾದರೂ ತಾವು ಕಟ್ಟಿಸಿಕೊಂಡ ದೇವಿಯ ಗುಡಿಗೆ ಹೋಗಿ ಬರುತ್ತಾರೆ. ಗಂಡು ಜೋಗಮ್ಮನವರು ಯಾರ ಎಂಜಲವನ್ನೂ, ಕಾಗೆ ಮುಟ್ಟಿದ ಆಹಾರವನ್ನು ತಿನ್ನುವವರಲ್ಲ.

5.11. ಪ್ರತ್ಯೇಕ ಸಾಮಾಜಿಕ ವ್ಯವಸ್ಥೆ:

ಗಂಡು ಜೋಗಮ್ಮರು ರೂಢಿಯ ಸಮಾಜ ವ್ಯವಸ್ಥೆಯಿಂದ ಭಿನ್ನರಾದ ಬೇರೆ ತಮ್ಮದೇ ಸಾಮಾಜಿಕ ವ್ಯವಸ್ಥೆಯೊಂದನ್ನು ರೂಪಿಸಿ ಕೊಳ್ಳುತ್ತಾರೆ. ತಮ್ಮ ತಮ್ಮಲ್ಲಿಯೇ ಸಂಬಂಧಗಳನ್ನು ಸೃಷ್ಟಿಸಿ ಕೊಳ್ಳುತ್ತಾರೆ. ತುಂಬಾ ಹಿರಿಯರಾದವರನ್ನು ಅತ್ತೆ ಎನ್ನುತ್ತಲೋ, ಕಿರಿಯವಳನ್ನು ತಂಗಿ ಎನ್ನುತ್ತಲೋ, ವಯಸ್ಸಿಗೆ ಸ್ವಲ್ಪ ಹಿರಿಯರಾದರೆ ಅಕ್ಕ, ಚಿಕ್ಕಮ್ಮ, ಹೀಗೆ ಸಂಬಂಧಗಳು 'ಏರ್ಪಡುತ್ತಾ ಹೋಗುತ್ತವೆ. ಆದರೆ ಅವು ಸ್ತ್ರೀ ನಿರ್ದೇಶಕ ಸಂಬಂಧಗಳೇ ಆಗಿರುತ್ತವೆ ಎಂಬುದು ಗಮನಾರ್ಹ. ಈ ಸಾಮಾಜಿಕ ವ್ಯವಸ್ಥೆಯನ್ನು ನಿಯಂತ್ರಿಸುವ ಅವರಲ್ಲಿಯೇ ಯಾರಾದರೊಬ್ಬ ಗುರು ಇರುತ್ತಾನೆ. ಈತ ಅವರಲ್ಲಿ ಹಿರಿಯನಾಗಿದ್ದು ಅನುಭವಿಯೂ ಆಗಿರುತ್ತಾನೆ.

5.12. ಸಾಮಾಜಿಕ ಸ್ಥಾನಮಾನಗಳು:

ಗಂಡು ಜೋಗಮ್ಮರಿಗೆ ಎಲ್ಲಮ್ಮನ ಕೃಪಾಕಟಾಕ್ಷ ಇಷ್ಟೇ ಇದ್ದರೂ ಸಾಮಾಜಿಕವಾಗಿ ಅವರಿಗೆ ಅಂತಹ ಸ್ಥಾನಮಾನಗಳಿಲ್ಲ. ಗಂಡು ಜೋಗಮ್ಮನೆಂಬ ತಾತ್ಸಾರವೇ ಇರುತ್ತದೆ.

ಹಾಗಾಗಿ ಇವರೊಂದಿಗೆ ಬೇರೆಯವರ ಸಂಬಂಧಗಳನ್ನು ಅನುಮಾನಾಸ್ಪದವಾಗಿ ನೋಡಲಾಗುತ್ತದೆ. ಅವರ ಕುರಿತು ಯಾವುದೇ ವಿವರಗಳನ್ನು ನೆರೆ ಕರೆಯವರಿಂದ ಕೇಳಿದಾಗ 'ನಮ್ಗೇನು ಗೊತ್ತ್ರೀ ಅವರ ವಿಚಾರ' ಎಂದು ವಿಷಯ ಬದಲಾಯಿಸುವುದೇ ಹೆಚ್ಚು.

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡು ಜೋಗಮ್ಮರ ಯಾವುದೇ ರೀತಿಯ ಸಂಬಂಧವನ್ನು 'ಸಲಿಂಗ ಕಾಮ' ದ ನೆಲೆಯಲ್ಲಿ ಪರಿಗಣಿಸಲಾಗುತ್ತದೆ. ಈ ದೃಷ್ಟಿಯಿಂದಲೇ ಹೊಸಪೇಟೆ ತಾಲೂಕಿನಾದ್ಯಂತ ಸಾಮಾನ್ಯವಾದ ಒಂದು ಬೈಗುಳವೆಂದರೆ 'ಮುಕುಳಿಗೆ ಹಚ್ಚಿಕೊಳ್ಳುವುದು' ಹಾಗೆಂದರೆ 'ಷಂಡ' ನೆಂದೇ ಅರ್ಥ.

ಹಾಗೆಯೇ ಹಳ್ಳಿಯ ಒಟ್ಟು ನ್ಯಾಯ ವ್ಯವಸ್ಥೆಯಲ್ಲೂ ಇವರಿಗೆ ಸ್ಥಾನಮಾನವಿಲ್ಲ. ನ್ಯಾಯ ತೀರ್ಮಾನದ ಸಂದರ್ಭದಲ್ಲಿ ಗಂಡು ಜೋಗಪ್ಪರಿಗೆ ಪಾಲ್ಗೊಳ್ಳುವಂತಿಲ್ಲ. ಅಥವಾ ಅವರ ಅಭಿಪ್ರಾಯಗಳಿಗೆ ಬೆಲೆಯಿಲ್ಲ.

5.13 ಒಟ್ಟಾರೆ ಸ್ಥಿತಿಗತಿ:

ಇದು ಸಾಮಾಜಿಕವಾಗಿ ಅವರ ಸ್ಥಿತಿಗತಿಯಾದರೆ ನಾಗರಿಕ ನೆಲೆಯಲ್ಲೂ ಯಾವುದೇ ಪುರಸ್ಕಾರಗಳಿರುವುದಿಲ್ಲ. ಕೆಲವರು ಮತದಾರರ ಪಟ್ಟಿಯಲ್ಲಿ ಸೇರಿರುವರಾದರೂ ಹೆಚ್ಚಿನವರು ಮತದಾರ ಪಟ್ಟಿಯಲ್ಲಿ ಸೇರಿದವರಲ್ಲ. ಮತದಾರ ಪಟ್ಟಿಯಲ್ಲಿ ಸೇರಿಸಲಾದವರನ್ನು ಪಟ್ಟಿಯಲ್ಲಿ ಗಂಡಸರೆಂದೇ ಪರಿಗಣಿಸಲಾಗಿದೆ. ಶಾಲೆ, ಕಾಲೇಜು ಓದುವ ಹಂತದಲ್ಲಿಯೇ ಇಂತಹ ಗುಣಗಳನ್ನು ತೋರ್ಪಡಿಸಿದವರನ್ನು ಹೆಚ್ಚು ಕಡಿಮೆ ಬಹಿಷ್ಕರಿಸಲಾಗುತ್ತದೆ. ಅಥವಾ ಅವರೇ ಓದಿಗೆ ತಿಲಾಂಜಲಿ ನೀಡುತ್ತಾರೆ.

ವಿದ್ಯಾವಂತರು ಇವರ ಬಗೆಗೆ ಅನೇಕ ಅಸಹನೆ ಹಾಗೂ ಸಂದೇಹಗಳನ್ನು ವ್ಯಕ್ತಪಡಿಸುತ್ತಾರೆ. ಮುಖ್ಯವಾಗಿ ಯುವಕರನ್ನು ದಾರಿತಪ್ಪಿಸುತ್ತಾರೆ. ಎಂದಾದರೆ ಏಡ್ಸ್‌ನಂತಹ ಖಾಯಿಲೆಯನ್ನು ತರುವವರಾಗಿದ್ದಾರೆ ಎಂಬ ಅನುಮಾನವೂ ಅವರಿಗಿದೆ.

ಆದರೆ ಒಂದಂತೂ ನಿಜ. ಸಾರ್ವಜನಿಕ ವಲಯದಲ್ಲಿ ಇವರ ಬಗೆಗೆ ವಿಚಿತ್ರ ಕಲ್ಪನೆಗಳಿವೆ. ಕೆಲವರ ಪ್ರಕಾರ ದೇವಿಯೇ ಮೈ ಮೇಲೆ ಬಂದು ಅವರ ಪುರುಷತ್ವ ಹರಣ ಮಾಡುತ್ತಾಳೆ. ಅವರಿಗೆ ಲೈಂಗಿಕಾವಯವಗಳೇ ಇರುವುದಿಲ್ಲ, ಸ್ತ್ರೀ ಮತ್ತು ಪುರುಷರಿಬ್ಬರ ಲೈಂಗಿಕಾವಯವಗಳೂ ಇರುತ್ತವೆ, ಸ್ತ್ರೀಯ ಲೈಂಗಿಕಾವಯವಗಳಿರುತ್ತವೆ. ಮುಟ್ಟಾಗುತ್ತಾರೆ. ಈ ರೀತಿಯ ಅನೇಕ ನಂಬಿಕೆಗಳಿವೆ. ಇವರೂ ಅದನ್ನು ಹೆಚ್ಚು ಕಡಿಮೆ ನಂಬಿಸುವ ರೀತಿಯಲ್ಲೇ ವರ್ತಿಸುತ್ತಾರೆ ಅಥವಾ ನಂಬಿಸುತ್ತಾರೆ.

ಅಧ್ಯಾಯ – 6

ಉಪಸಂಹಾರ

6.1 ಸ್ತ್ರೀತ್ವದ ಬಗೆಗಿನ ಭ್ರಮ

6.2 ಜಘನ ಕೇಂದ್ರಿತ ಲೈಂಗಿಕತೆ

ಈ ಸುದೀರ್ಘ ಬರವಣಿಗೆಯ ಹಿನ್ನೆಲೆಯಲ್ಲಿ ಉಪಸಂಹಾರವಾಗಿ ಕೆಲವೊಂದು ನಿಲುವುಗಳನ್ನು ಇಲ್ಲಿ ಹಂಚಿ ಕೊಳ್ಳಲಾಗಿದೆ. ವೈಜ್ಞಾನಿಕ ಶೋಧಗಳೇನೇ ಹೇಳಿದರೂ ಅದರಿಂದಾಚೆಗೂ ವರ್ತಿಸುವ ಒಂದು ನಾಡಿನ ಚಿಂತನೆಯ ಅಂತರ್ಯಕ್ಕೆ ಸಂಬಂಧಿಸಿದ ಮಾತಿದು.

'ಗಂಡು ಜೋಗವ್ವ' ರ ಸಂಪ್ರದಾಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ವ್ಯಕ್ತವಾಗುವ ಅಂಶಗಳಿವು — ಮೊದಲನೆಯದು, ಸ್ತ್ರೀತ್ವದ ಬಗೆಗಿರುವ ಭಯ, ಎರಡನೆಯದು ಜಘನ ಕೇಂದ್ರಿತ ಲೈಂಗಿಕತೆ

6.1 ಸ್ತ್ರೀತ್ವದ ಬಗೆಗಿನ ಭಯ:

ಭಾರತೀಯ ಸಂಸ್ಕೃತಿಯ ಗ್ರಹಿಕೆಯ ಮೂಲದಲ್ಲಿ ಸ್ತ್ರೀಯ ಬಗೆಗೆ ಅಪಾರವಾದ ಭಯವಿದೆ. ಈ ಭಯದ ಕಾರಣದಿಂದಲೇ ಸ್ತ್ರೀಯನ್ನು ದೂರೀಕರಿಸಲಾಗಿದೆ ಅಥವಾ ಪೂಜಿಸಲಾಗಿದೆ. ಮನುವಿನ ಎರಡು ಸುಪ್ರಸಿದ್ಧ ಹೇಳಿಕೆಗಳನ್ನು ಅರ್ಥೈಸಿಕೊಳ್ಳಬೇಕಾದುದು ಈ ನೆಲೆಯಲ್ಲಿಯೇ. ಕಾಮಶಾಸ್ತ್ರದಲ್ಲಿಯೂ ಸ್ತ್ರೀಯ ಕಾಮದ ಕುರಿತು ವಾತ್ಸ್ಯಾಯನ ಹೌಹಾರಿದ್ದಾನೆ. ಷಂಡತ್ವದ ಗ್ರಹಿಕೆಯೆಲ್ಲವೂ ನಿಂತಿರುವುದು ನಿರ್ವೀರ್ಯತೆಯ ಆಧಾರದ ಮೇಲೆಯೇ. ಈ ಭಯದ ಕಾರಣದಿಂದಲೇ ಹೆಂಡತಿಯನ್ನು ಕೂಡ 'ಜಾಯಾ' ಎಂದು ಗ್ರಹಿಸುವ, ಗಂಡನೇ ಮತ್ತೆ ಮಗುವಾಗಿ ಜನ್ಮ ಪಡೆಯುತ್ತಾನೆ ಎನ್ನುವ ಚಿಂತನೆಗಳು ನಮ್ಮಲ್ಲಿವೆ.

ಆಶ್ಚರ್ಯವೆಂದರೆ ಜಾನಪದ ದೇವತೆಗಳ ಕಲ್ಪನೆಗಳು ಕೂಡ ಇದಕ್ಕಿಂತ ಭಿನ್ನವಲ್ಲದಿರುವುದು. ಎಲ್ಲಮ್ಮನಂತವಳ ನೋಟದಿಂದ ಗಂಡು ಹೆಣ್ಣಾಗುತ್ತಾನೆ ಎಂದು ನಂಬಲಾಗಿದೆ. ಭಯ ಹುಟ್ಟಿಸುವ ಸ್ತ್ರೀ ದೇವತೆಗಳ ಮೂರ್ತಿಗಳಂತೂ ನಮ್ಮ ಜನಪದರ ಹೆಣ್ಣಿನ ಗ್ರಹಿಕೆಯ ಅಂತರ್ಯವನ್ನು ಬಹಿರಂಗ ಪಡಿಸುವ ಸ್ಪಷ್ಟ ಪುರಾವೆಗಳು. ಹಾಗಾದುದರಿಂದ ವೈದಿಕವೇ ಇರಲಿ, ಜಾನಪದವೇ ಇರಲಿ — ಸ್ತ್ರೀಯ ಕುರಿತ ಚಿಂತನೆಗಳಲ್ಲಿ ಭಾರತೀಯರಲ್ಲಿ ಸಾಮ್ಯತೆ ಇದ್ದೇ ಇದೆ.

6 3 ಜನನ ಕೇಂದ್ರಿತ ಲೈಂಗಿಕತೆ:

ಇದರ ಪ್ರತಿಕ್ರಿಯೆ ಪುರುಷ ಲೈಂಗಿಕತೆಗೆ ತನಗೆ ತಾನೇ ಅವಲಂಬಿತನಾದುದು. ಈಗಾಗಲೇ ಹೇಳಿರುವಂತೆ 'ಮುಕುಳಿಗೆ ಹಿಡ್ಸಿ ಕೊಳ್ಳೋದು' ಎನ್ನುವುದು ಇಲ್ಲಿಯ ಸಾಂಸ್ಕೃತಿಕ ಆವರಣಕ್ಕೆ ಸೇರಿ ಹೋಗಿರುವ ಬೈಗುಳ. ಈ ರೀತಿಯ ಲೈಂಗಿಕತೆಯನ್ನು ಪಡೆಯಲೆಂದೇ ಎಲ್ಲವೂ ನಮ್ಮನ್ನು ಹೀಗೆ ಮಾಡಿರುವುದೆಂದೂ ಒಬ್ಬ ಗಂಡು ಜೋಗಮ್ಮರ ಅಭಿಪ್ರಾಯ. ಸಲಿಂಗ ಕಾಮವನ್ನು ಸಾಮಾಜಿಕ ಗೊಳಿಸುವ, ಮದುವೆಯಂತಹ ಸಾಂಪ್ರದಾಯಿಕ ಸಂಸ್ಥೆಯನ್ನು ಭಗ್ನ ಗೊಳಿಸುವ(ಪರಸ್ಪರ ಗಂಡಸರೇ ಗಂಡಸರನ್ನು ಮದುವೆಯಾಗುವ) ಹೊಸ ನಿಲುವುಗಳು ಇಲ್ಲಿ ವ್ಯಕ್ತವಾಗಿದೆ.

ಒಂದು ದೃಷ್ಟಿಯಿಂದ ಇದನ್ನು ಭಾರತಕ್ಕೆ ಮಾತ್ರ ಸೀಮಿತಗೊಳಿಸಲಾಗುವುದಿಲ್ಲ. ಬೈಬಲ ಮತ್ತು ಕುರಾನಗಳು ಸ್ತ್ರೀಯ ಬಗೆಗೆ ತಳೆದ ನಿಲುವಿಗೂ ಭಾರತೀಯ ಆರ್ಷೇಯ ಗ್ರಂಥಗಳ ನಿಲುವಿಗೂ ಸಾಮ್ಯ ಇದೆಂದೇ. ಈಗಾಗಲೇ ಹೇಳಿರುವ 'ಮಹಾಮಾತೆಯ ಸಂಪ್ರದಾಯ' ವನ್ನೂ ಇಲ್ಲಿ ಮತ್ತೆ ನೆನಪಿಸಿ ಕೊಳ್ಳಬಹುದು.

ಹಾಗಾದುದರಿಂದ ಇದು ಒಟ್ಟು ಪುರುಷ ಪ್ರಧಾನ ಸಮಾಜದ ಗ್ರಹಿಕೆಯೇ ಆಗಿದೆ ಎನ್ನದೆ ಗತ್ಯಂತರವಿಲ್ಲ. ಪಾಶ್ಚಾತ್ಯ ಸಮಾಜಗಳಲ್ಲಿ ಮೂಲತಃ ಇಂತಹ ನಿಲುವುಗಳೇ ಇದ್ದರೂ ಕಾಲದ ಪರೀಕ್ಷೆಯಲ್ಲಿ ತಮ್ಮನ್ನು ತಾವು 'ಒಡ್ಡಿಕೊಂಡ ಅವು ಗಮನಾರ್ಹವಾಗಿ ಬದಲಾವಣೆಯಾಗಿವೆ. ಧಾರ್ಮಿಕ ನೆಲೆಗಟ್ಟು ಇನ್ನೂ ಭದ್ರವಾಗಿರುವ ಭಾರತೀಯ ಸಮಾಜಗಳಲ್ಲಿ ಈ ತೊಳಲಾಟ ಉಲ್ಬಣಾವಸ್ಥೆಯಲ್ಲಿದೆ. ಅದರ ಫಲ ಗಂಡು ಜೋಗಮ್ಮರ ಸಂಖ್ಯೆ ಹೆಚ್ಚುತ್ತಲೇ ಹೋಗುತ್ತಿರುವುದು.

ಕೊನೆ ಟಿಪ್ಪಣಿಗಳು

ಅಧ್ಯಾಯ – 1

1. ಸರಿನಾ ನಂದ ಅವರ ಕೃತಿಯಾಗಲೀ, ದೆಹಲಿ ವಿಶ್ವವಿದ್ಯಾಲಯದವರ ಅಧ್ಯಯನವನ್ನಾಗಲೀ ಈ ಮಹಾಪ್ರಬಂಧದ ಸಿದ್ಧತೆಯ ಕಾಲಕ್ಕೆ ನನಗೆ ಗಮನಿಸುವುದಕ್ಕಾಗಲಿಲ್ಲ.

   'ಕನ್ನಡ ಜಾನಪದ ವಿಶ್ವಕೋಶ'(ಡಾ: ಚಂದ್ರಶೇಖರ ಕಂಬಾರ) ದಲ್ಲಿಯೂ 'ಖೋಜಾ' ಎಂಬ ನಮೂದು ಇದೆ.

2. 'ತೃತೀಯ ಲಿಂಗ' ಎನ್ನುವ ಪದವನ್ನು 'The Third Gender' ಎನ್ನುವ ಅರ್ಥದಲ್ಲಿ ಬಳಸಲಾಗಿದೆ.

   'ಪುಗಿಲು' ಪದವನ್ನು 'ಪ್ರವೇಶ' ಕ್ಕೆ ಸಂವಾದಿಯಾಗಿ ಬಳಸಲಾಗಿದೆ. ಪುಗಿಲ್– ಪುಗಿಲು ಶಬ್ದ ರೂಪಗಳು. 'ಪುಗಿಲ್' ಹಳೆಗನ್ನಡದಲ್ಲಿ ಬಳಕೆಯಲ್ಲಿದ್ದು ಈಗ ಬಳಕೆಯಲ್ಲಿ ತಪ್ಪಿದ ವಿಶಿಷ್ಟ ಶಬ್ದ. ಇಲ್ಲಿ ಪಾರಿಭಾಷಿಕವಾಗಿ ಬಳಸಲಾಗಿದೆ.

ಅಧ್ಯಾಯ – 2

1. ನೋಡಿ: The Oxford Thesaurus An A-Z Dictionary of synonyms

2. 2ರಿಂದ 15 ರ ವರೆಗಿನ ಈ ಉಲ್ಲೇಖಗಳು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ – ಕನ್ನಡ ನಿಘಂಟಿನಿಂದ ಆಯ್ದವುಗಳು.

16. ನೋಡಿ: The Encyclopaedia of Britannica ಸಂಪುಟ 4.

17. ನೋಡಿ: The Oxford Encyclopaedia of Riligion
ಸಂಪುಟ 16

18. ನೋಡಿ: ಪ್ರವಾಸಿ ಕಂಡ ಇಂಡಿಯಾ (ಸಂಪುಟ 4) ಪು. 152, 386, 406, 410, 412, ಅದೇ (ಸಂಪುಟ 5) ಪು. 177. ಅದೇ (ಸಂಪುಟ 6) ಪು. 89, 65, 96.

19. ನೋಡಿ: ಪ್ರಜಾವಾಣಿಯ ಸಾಪ್ತಾಹಿಕ ಪುರವಣಿಯಲ್ಲಿ ಎನ್. ಆರ್. ಪಾಟೀಲರವರ ಲೇಖನ (ದಿನಾಂಕ 22.8.1993)

20. ನೋಡಿ: ರಾಬರ್ಟ್ ಸಿವೆಲನ 'ಮರೆತುಹೋದ ವಿಜಯನಗರದ ಸಾಮ್ರಾಜ್ಯ' ಪು. 269

ಅಧ್ಯಾಯ — 3

1. ನೋಡಿ: ಪ್ರಜಾವಾಣಿಯ ಸಾಪ್ತಾಹಿಕ ಪುರವಣಿಯಲ್ಲಿ ಎನ್. ಆರ್, ಪಾಟೀಲರವರ ಲೇಖನ (ದಿನಾಂಕ 22.8.1993)

2. ನೋಡಿ: ಅಣ್ಣಾರಾಯ ಅಪ್ಪಣ್ಣ ಮಿರ್ಜಿ ಯವರ ಸಮಂತಭದ್ರ ವಿರಚಿತ ರತ್ನಕರಂಡಕ — ಶ್ರಾವಕಾಚಾರ ಪು. 107

3. ನೋಡಿ: ಪ್ರೊ: ಕೆ. ಎಸ್ ನಾರಾಯಣಾಚಾರ್ಯರ ಶ್ರೀ ಮಹಾಭಾರತ ಪಾತ್ರ ಪ್ರಪಂಚ. ಪು. 35 — 57

ಅಧ್ಯಾಯ — 4

1. ಈ ಅಧ್ಯಾಯಕ್ಕೆ ಆಧಾರ ಗ್ರಂಥ ಡಾ|| ಬಿ. ಪಿ. ಚಟರ್ಜಿಯವರ A Short Text Book Of Surgery volume 1.
2. ಇದು ಕಮಲಾಪುರದ ವೈದ್ಯರಾದ ಮನೋಹರ ಅವರ ಅಭಿಪ್ರಾಯ.

ಅಧ್ಯಾಯ — 5

1. ಮುಸ್ಲಿಂ ಜೋಗಮ್ಮರಿರುವುದು ತಿಳಿದು ಬಂದಿರುವುದಾದರೂ ಅವರನ್ನು ಸಂದರ್ಶಿಸುವುದಕ್ಕೆ ಆಗಲಿಲ್ಲ. ಕ್ರೈಸ್ತ ಜೋಗಮ್ಮರಿರುವುದು ತಿಳಿದು ಬಂದಿಲ್ಲ. ಆದರೆ ಯಾರಾದರೂ ಆಗಬಹುದು ಎಂಬುದು ಗಂಡು ಜೋಗಮ್ಮರ ಅಭಿಪ್ರಾಯ.

2. ಇವರನ್ನು ಗಮನಿಸಲಾಗಿದೆ. ಆದರೆ ಸಂಪರ್ಕಿಸುವುದಕ್ಕೆ ಸಾಧ್ಯವಾಗಲಿಲ್ಲ.

3. 'ಉದೋ ಅಂದರೆ ಉದ್ರು ಗಾಳಿ' ಎಂಬುದು ಜೋಗಮ್ಮರು ಹೇಳುವ ಗಾದೆ.

ಅಧ್ಯಾಯ — 6

1. ಹೆಚ್ಚಿನ ವಿವರಕ್ಕೆ ನೋಡಿ: ಪೋಲಂಕಿ ರಾಮ ಮೂರ್ತಿಯವರ 'ಸೀತಾಯಣ' ಕೃತಿಯ 'ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ' ಪು. 102

ಅನುಬಂಧ – 2

ಗ್ರಂಥಋಣ:

ಕನ್ನಡ:

1. ಅಣ್ಣಾರಾಯ ಅಪ್ಪಣ್ಣ ಮಿರ್ಜಿ (ಅನು) 'ಸಮಂತಭದ್ರ ವಿರಚಿತ ರತ್ನಕರಂಡಕ – ಶ್ರಾವಕಾಚಾರ', (1981). ಬೆಂಗಳೂರು: ಜೈನ ಸಂಸ್ಕೃತಿ ಸಂರಕ್ಷಕ ಸಂಘ.

2. ಈಶ್ವರ ಶಾಸ್ತ್ರೀ ಚಕ್ರಕೋಡಿ (ಅನು) 'ಮನುಸ್ಮೃತಿ' (1979). ಧಾರವಾಡ: ಸಮಾಜ ಪುಸ್ತಕಾಲಯ.

3. ಗುರುನಾಥ ಜೋಶಿ (ಸಂ) 'ಕನ್ನಡ – ಕನ್ನಡ ಶಬ್ದಕೋಶ' (1990). ಗದಗ: ಮೆ: ಬಿ. ಜಿ. ಸಂಕೇಶ್ವರ ಅ್ಯಂಡ ಕಂಪನಿ.

4. ನಾಗೇಗೌಡ ಎಚ್. ಎಲ್., (ಅನು) 'ಪ್ರವಾಸಿ ಕಂಡ ಇಂಡಿಯಾ' ಸಂ. 3. (1961). ಮೈಸೂರು: ಪ್ರಸಾರಾಂಗ.

5. ನಾಗೇಗೌಡ ಎಚ್. ಎಲ್., (ಅನು) 'ಪ್ರವಾಸಿ ಕಂಡ ಇಂಡಿಯಾ' ಸಂ. 4 (1972). ಮೈಸೂರು: ಪ್ರಸಾರಾಂಗ.

6. ನಾಗೇಗೌಡ ಎಚ್. ಎಲ್., (ಅನು) 'ಪ್ರವಾಸಿ ಕಂಡ ಇಂಡಿಯಾ' ಸಂ. 5 (1975). ಮೈಸೂರು: ಪ್ರಸಾರಾಂಗ.

7. ನಾಗೇಗೌಡ ಎಚ್. ಎಲ್., (ಅನು) 'ಪ್ರವಾಸಿ ಕಂಡ ಇಂಡಿಯಾ' ಸಂ. 6 (1977). ಮೈಸೂರು: ಪ್ರಸಾರಾಂಗ.

8. ನಾಗೇಗೌಡ ಎಚ್. ಎಲ್., (ಅನು) 'ಪ್ರವಾಸಿ ಕಂಡ ಇಂಡಿಯಾ' ಸಂ. 7 (1983). ಮೈಸೂರು: ಪ್ರಸಾರಾಂಗ.

9. ಪೋಲಂಕಿ ರಾಮಮೂರ್ತಿ, 'ಸೀತಾಯಣ' (1984). ಶಿವಮೊಗ್ಗ: ಮೀರಾ ಪ್ರಕಾಶನ, ಎರಡನೇ ಅಡ್ಡರಸ್ತೆ, ಗಾಂಧೀ ಬಜಾರ.

10. (?), 'ಸತ್ಯವೇದವು' (?). ಬೆಂಗಳೂರು: ಬೈಬಲ ಸೊಸೈಟಿ ಆಫ್ ಇಂಡಿಯಾ 206, ಮಹಾತ್ಮಗಾಂಧಿ ರಸ್ತೆ.

11. ವೆಂಕಟ ಜಿ. ಭಸ್ಮೆ, (ಅನು) 'ಶ್ರೀ ವಾತ್ಸ್ಯಾಯನ ಮುನಿಕೃತ ಕಾಮಸೂತ್ರ' (1983). ಧಾರವಾಡ: ಸಮಾಜ ಪುಸ್ತಕಾಲಯ.

12. ವೆಂಕಟಸುಬ್ಬಯ್ಯ ಜಿ.,(ಸಂ) 'ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಸಂ. 3 (1976). ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

13. ಶ್ರೀಕಂಠಯ್ಯ ಕೆ, 'ವಿಜಯ ನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ': ಸಾಮಾಜಿಕ, ಆರ್ಥಿಕ, ರಾಜಕೀಯ' (1983). ಮೈಸೂರು: ಗೀತಾ ಬುಕ್ ಹೌಸ್.

14. ಸದಾನಂದ ಕನವಳ್ಳಿ, (ಅನು) 'ಮರೆತು ಹೋಗಿರುವ ವಿಜಯನಗರ ಸಾಮ್ರಾಜ್ಯ' (1992). ಹಂಪಿ: ಕನ್ನಡ ವಿಶ್ವವಿದ್ಯಾಲಯ.

ಲೇಖನಗಳು: (ಕನ್ನಡ)

1. ಅಹುಜ, ''ಏಡ್ಸ್' ಹರಡುವ ಶಿಖಂಡಿ ಪ್ರಪಂಚ'
ತರಂಗ: ಮಣಿಪಾಲ.

2. ಪಾಟೀಲ ಎನ್.ಆರ್. 'ಮೋಜಾಗಳ ಯಾತನೆಯ ಬದುಕು'
ಪ್ರಜಾವಾಣಿ: ಬೆಂಗಳೂರು. 22.8.1993

English

1. Chatarjee S.P. , 'A Short Text Book of Surgery , Volume 1 ,' (1978) . Culutta: New central Book , Agency 3/1 Chintamony Das lane

2. Mariappa Bhat M(ED) , Kittel's Kannada - English Dictionary, Volume 2, (1977).Madrass:University of Madrass.

3. Sir Monier Monier-Williams, 'A Sanskrit English Dictionary', (1986),. Delhi:Motelal Banarsidass.

4. 'The Encyclopaedia of Britannica,' Volume 4, (1992). Chicago:The University of Chicago.

5. 'The Encyclopaedia of Britannica', Volume 12(1992). Chicago:The University of Chicago.

6. 'The Encyclopaedia of Britannica', Volume16(1992). Chicago:The University of Chicago.

7. 'The Encyclopaedia of Religion', Volume16, (1987). London:Macmillan Publishing Company Newyork

8. 'The Oxfrd The saurus An A-Z Dicetionary of Synonims' (1991).Oxfrd : Clarendon Press.

9. William Dalrymple, 'City of Djinns' (1993): New Delhi : Harper Collins Publishers.

ಅನುಬಂಧ — 3

ಸಂದರ್ಶಿಸಿದ ಗಂಡು ಜೋಗಮ್ಮರ ವಿವರಗಳು:

1. ಈರಪ್ಪ ಯಾನೆ ಈರಮ್ಮ, (ನೇಕಾರ, 50 ವರ್ಷ)
   ಕಿನ್ನಾಳ, ಕೊಪ್ಪಳ ತಾಲೂಕ, ರಾಯಚೂರು ಜಿಲ್ಲೆ.

2. ಅಕ್ಬರ್ ಯಾನೆ ಲತಾ, (ಹರಿಜನ, 25 ವರ್ಷ)

3. ಗಾಳೆಪ್ಪ ಯಾನೆ ಗಾಳೆಮ್ಮ, (ಹರಿಜನ, 75 ವರ್ಷ)
   ಕಮಲಾಪುರ, ಹೊಸಪೇಟೆ ತಾಲೂಕು.

4. ಗಾಳೇರ ರಾಜಪ್ಪ ಯಾನೆ ರಾಜಮ್ಮ, (50 ವರ್ಷ)
   ಕಮಲಾಪುರ, ಹೊಸಪೇಟೆ ತಾಲೂಕು.

5. ತಾಯಪ್ಪ ಯಾನೆ ತಾಯಮ್ಮ, (ವಡ್ಡ, 22)
   ಕಮಲಾಪುರ, ಹೊಸಪೇಟೆ ತಾಲೂಕು.

6. ಬಾವರ್ಲಿ ಯಾನೆ ಸುಮ, (ನಾಯಕ, 45 ವರ್ಷ)
   ಹೊಸಪೇಟೆ, ಹೊಸಪೇಟೆ ತಾಲೂಕು.

7. ಮಲ್ಲೇಶಿ ಯಾನೆ ಮಲ್ಲಕ್ಕ, (ಹರಿಜನ, 28 ವರ್ಷ)
   ಹೊಸಪೇಟೆ, ಹೊಸಪೇಟೆ ತಾಲೂಕು.

8. ಮುನಿಯಾ ಯಾನೆ ಮುನ್ನಿ, (ತಲವಾಡಿ, 27 ವರ್ಷ)
   ಹೊಸಪೇಟೆ, ಹೊಸಪೇಟೆ ತಾಲೂಕು.

9. ರತ್ನ ಯಾನೆ ರತ್ನೆ, (ಲಂಬಾಣಿ, 28 ವರ್ಷ)
   ಕೊಂಡನಾಯಕನ ಹಳ್ಳಿ, ಹೊಸಪೇಟೆ ತಾಲೂಕು.

10. ರಾಮಣ್ಣ ಯಾನೆ ರಾಮಕ್ಕ, (ವೇ[illegible]ಾರ, 45 ವರ್ಷ)
    ಹೊಸಪೇಟೆ, ಹೊಸಪೇಟೆ ತಾಲೂಕು.

11. ರುದ್ರಪ್ಪ ಯಾನೆ ರುದ್ರಿ, (ನಾಯಕ, 30 ವರ್ಷ)
ಹಂಪಿ, ಹೊಸಪೇಟೆ ತಾಲೂಕು.

12. ವಿಜಯ (ವಡ್ಡ 30 ವರ್ಷ)
ಕಮಲಾಪುರ, ಹೊಸಪೇಟೆ ತಾಲೂಕು.

13. ವೆಂಕಟೇಶ ಯಾನೆ ವೆಂಕಮ್ಮ, (ಹರಿಜನ, 22 ವರ್ಷ)
ಹೊಸಪೇಟೆ, ಹೊಸಪೇಟೆ ತಾಲೂಕು.

14. ಲಕ್ಷ್ಮಣ ಯಾನೆ ಲಕ್ಷ್ಮಿ, (ಹರಿಜನ, 31 ವರ್ಷ)
ಹೊಸಪೇಟೆ, ಹೊಸಪೇಟೆ ತಾಲೂಕು.

15. ಹುಲುಗಪ್ಪ ಯಾನೆ ಹುಲುಗವ್ವ, (ಹರಿಜನ 32 ವರ್ಷ)
ಹೊಸಪೇಟೆ, ಹೊಸಪೇಟೆ ತಾಲೂಕು.

20368